ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಮೇ 06, 2023

ಸಂಪುಟ : 49 ಸಂಚಿಕೆ : 354 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







## ಕನ್ನಡ ಪ್ರೀತಿಸಿ, ಬೇರೆ ಭಾಷೆ ದ್ವೇಷಿಸದಿರಿ

### ಕಸಾಪ 109ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಬ್ರಹ್ಮಾಕುಮಾರಿ ಲೀಲಾಜಿ



ದಾವಣಗೆರೆ, ಮೇ 4- ಕನ್ನಡದ ಮೇಲೆ ಪ್ರೀತಿ, ಅಭಿಮಾನವಿರಬೇಕು. ಆದರೆ ಬೇರೆ ಭಾಷೆಯನ್ನು ದ್ವೇಷಿಸಬಾರದು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿ ದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಶುಕ್ರವಾರ ಸಂಜೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಚೀನ ಕಾಲದಲ್ಲಿ ಭಾರತ ಒಂದೇ ಆಗಿತ್ತು. ಜಾತಿ, ಭಾಷೆ, ಮತ ಎಲ್ಲಾ ಒಂದೇ ಆಗಿದ್ದವು. ನಂತರ ದಿನಗಳಲ್ಲಿ ಭಾಷೆಗಳು ಹುಟ್ಟಿಕೊಂಡವು. ಹಾಗೆಯೇ ಕನ್ನಡವೂ ಮಧ್ಯಕಾಲದಿಂದ ಬಂದ ಭಾಷೆಯಾಗಿದೆ. ಭಾಷೆ ಇರುವುದು ಪರಸ್ಪರ ಸ್ನೇಹ, ಸದ್ಭಾವನೆ ಬೆಳೆಸಲೆಂದು. ಭಾಷೆಯನ್ನು ಅಧ್ಯಯನ ಮಾಡಿ, ಅದರಲ್ಲಿನ ವೈವಿಧ್ಯತೆಯನ್ನು ತಿಳಿಯಬೇಕು ಎಂದು ಹೇಳಿದರು. (2ನೇ ಪುಟಕ್ಕೆ)

## ಹಿರಿತನ ಉಲ್ಲಂಘಿಸಿ ಜಡ್ಜ್‌ಗಳಿಗೆ ಬಡ್ತಿ ಸುಪ್ರೀಂ ವಿಚಾರಣೆ

ನವದೆಹಲಿ, ಮೇ 5 - ಅರ್ಹತೆ ಹಾಗೂ ಹಿರಿತನದ ತತ್ವ ಉಲ್ಲಂಘಿಸಿ ಗುಜರಾತ್‌ನ 68 ನ್ಯಾಯಮೂರ್ತಿಗಳ ಪದೋನ್ನತಿಗೆ ಆದೇಶಿಸ ಲಾಗಿದೆ ಎಂದು ದಾಖಲಾಗಿರುವ ಅರ್ಜಿಯನ್ನು ಮೇ 8ರಂದು ವಿಚಾರಣೆಗೆ ಒಳಪಡಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಹಿರಿಯ ಸಿವಿಲ್ ನ್ಯಾಯಮೂರ್ತಿಗಳಾದ ರವಿ ಕುಮಾರ್ ಮೆಹ್ತಾ ಹಾಗೂ ಸಚಿನ್ (4ನೇ ಪುಟಕ್ಕೆ)

## ಕೊರೊನಾ ಜಾಗತಿಕ ತುರ್ತು ಪರಿಸ್ಥಿತಿ ಅಲ್ಲ

ಜಿನೇವಾ, ಮೇ 5 – ಕೊರೊನಾ ಸೋಂಕು ಈಗ ಜಾಗತಿಕ ತುರ್ತು ಪರಿಸ್ಥಿತಿ ಅಲ್ಲ ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂ.ಹೆಚ್.ಒ.) ತಿಳಿಸಿದೆ. ವಿಶ್ವದಾದ್ಯಂತ ಅಭೂತಪೂರ್ವ ಸಂಕಷ್ಟ ತಂದಿದ್ದ, ಕೊರೊನಾ ಸೋಂಕು ಈಗ ಮರೆಯಾಗುವ ಸೂಚನೆ ತೋರುತ್ತಿದೆ.

ಕೊರೊನಾ ತುರ್ತು ಹಂತ ದಾಟಿದೆ. ಆದರೂ, ಮಹಾಮಾರಿ ಅಂತ್ಯವಾಗಿಲ್ಲ. ದಕ್ಷಿಣ (3ನೇ ಪುಟಕ್ಕೆ)

## ಸುಪ್ರೀಂ ಕೋರ್ಟ್ ನೈತಿಕತೆ ಬೋಧಿಸುವ ಸಂಸ್ಥೆಯಲ್ಲ

ನವದೆಹಲಿ, ಮೇ 5 - ತಾನು ಸಮಾಜಕ್ಕೆ ನೈತಿಕತೆ ಬೋಧಿಸುವ ಸಂಸ್ಥೆಯಲ್ಲ ಎಂದಿರುವ ಸುಪ್ರೀಂ ಕೋರ್ಟ್, ಇಬ್ಬರು ಮಕ್ಕಳಿಗೆ ವಿಷ ಉಣಿಸಿ ಹತ್ಯೆ ಮಾಡಿ 20 ವರ್ಷ ಜೈಲು ಶಿಕ್ಷೆ ಅನುಭವಿಸಿದ ತಾಯಿಯ ಬಿಡುಗಡೆಗೆ ಅನುಮತಿ ನೀಡಿದೆ.



ಇಬ್ಬರು ಮಕ್ಕಳ ಹತ್ಯೆ ಮಾಡಿದ ತಾಯಿಯನ್ನು ಅವಧಿ ಪೂರ್ವ ಬಿಡುಗಡೆ ಮಾಡುವುದನ್ನು ವಿರೋಧಿಸಿ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿತ್ತು. ಅರ್ಜಿಯನ್ನು ತಳ್ಳಿ ಹಾಕಿರುವ ನ್ಯಾಯಾಲಯ, ನೆಲದ ಕಾನೂನಿನ ಪ್ರಕಾರ ತಾಯಿಯನ್ನು ಬಿಡುಗಡೆ ಮಾಡಬೇಕು ಎಂದು ತಿಳಿಸಿದೆ.

ತಾಯಿಯು ತನ್ನ ಇಬ್ಬರು ಮಕ್ಕಳಿಗೆ ವಿಷ ಉಣಿಸಿ ನಂತರ ತಾನೂ ವಿಷ ಸೇವಿಸಿದ್ದಳು. ನಂತರ ಮಕ್ಕಳಿಬ್ಬರು ಸಾವನ್ನಪ್ಪಿದ್ದರೆ, ಸಂಬಂಧಿಯೊಬ್ಬರ ಮಧ್ಯ ಪ್ರವೇಶದಿಂದ ತಾಯಿ ಬದುಕುಳಿದಿದ್ದಳು. ನಂತರ ತಾಯಿಗೆ ಜೈಲು ಶಿಕ್ಷೆ ವಿಧಿಸಲಾಗಿತ್ತು.

ತಮಿಳುನಾಡಿನ ರಾಜ್ಯ ಮಟ್ಟದ ಸಮಿತಿಯ ಶಿಫಾರಸ್ಸಿನ ಮೇರೆಗೆ 20 ವರ್ಷ ಜೈಲು ಶಿಕ್ಷೆ ಅನುಭವಿಸಿದ ತಾಯಿಯ ಬಿಡುಗಡೆಗೆ ಆದೇಶಿಸಲಾಗಿತ್ತು.

ವ್ಯಕ್ತಿಯೋರ್ವನ ಜೊತೆ ಈ ಮಹಿಳೆ ಪ್ರೇಮ ಸಂಬಂಧ ಹೊಂದಿದ್ದಳು. ವ್ಯಕ್ತಿ ಮಹಿಳೆಯನ್ನು ಬೆದರಿಸುತ್ತಿದ್ದ. ಇದರಿಂದ ಬೇಸತ್ತ ಮಹಿಳೆ, ತನ್ನ ಮಕ್ಕಳಿಗೆ ವಿಷ ಹಾಕಿ, ತಾನೂ ಸಾವನ್ನಪ್ಪುವ ಪ್ರಯತ್ನ ನಡೆಸಿದ್ದಳು.

## ಐಟಿ ಕಂಪನಿಗಳ ಆರಂಭಕ್ಕೆ ಪ್ರಾಮಾಣಿಕ ಪ್ರಯತ್ನ



ದಾವಣಗೆರೆ, ಮೇ 5- ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನಗರದ 38ನೇ ವಾರ್ಡಿನ ಎಂ.ಸಿ. ಕಾಲೋನಿ ಬಿ ಬ್ಲಾಕ್ ಮತ್ತು 40ನೇ ವಾರ್ಡ್‌ನಲ್ಲಿ ಬರುವ ವಿವೇಕಾನಂದ ಬಡಾವಣೆ ಮತ್ತು ವಿನಾಯಕ ಬಡಾವಣೆಗಳಲ್ಲಿ ಬಿರುಸಿನ ಪ್ರಚಾರ ನಡೆಸಿ, ಮನೆ-ಮನೆಗೆ ತೆರಳಿ ಮತಯಾಚನೆ ಮಾಡಿದರು.

**38, 40 ನೇ ವಾರ್ಡ್‌ನಲ್ಲಿ ಎಸ್ಸೆಸ್ಸೆಂ ಮತಯಾಚನೆ**

ಈ ಸಂದರ್ಭದಲ್ಲಿ ಮತದಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಶೈಕ್ಷಣಿಕ ಕೇಂದ್ರವಾಗಿರುವ ದಾವಣಗೆರೆಯಲ್ಲಿ ಐಟಿ, ಬಿಟಿ ಕಂಪನಿಗಳು ಆರಂಭವಾಗಬೇಕಿದ್ದು, ಈ ದಿಸೆಯಲ್ಲಿ ತಾವು ಪ್ರಯತ್ನ ಮಾಡಿ ಉದ್ಯೋಗಾವಕಾಶ ಹೆಚ್ಚು ಮಾಡುವಲ್ಲಿ ಶ್ರಮಿಸುವುದಾಗಿ ಭರವಸೆ ನೀಡಿದರು.

ಸಾಫ್ಟ್‌ವೇರ್ ಕಂಪನಿಗಳ ಜೊತೆಗೆ ಸರ್ಕಾರದ ನೆರವಿನೊಂದಿಗೆ ಜಿಲ್ಲೆಯಲ್ಲಿ ಸಣ್ಣ, ಮಧ್ಯಮ ಮತ್ತು ಬೃಹತ್ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಹೆಚ್ಚಿನದಾಗಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿಯೂ ಸಹ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಅವರು (3ನೇ ಪುಟಕ್ಕೆ)

## ನಾಗರಾಜ್ ಲೋಕಿಕೆರೆಗೆ ಕೇಂದ್ರ ನಾಯಕರ ಸಾಥ್




ದಾವಣಗೆರೆ, ಮೇ 5- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರಿಗೆ ಬಿರುಸಿನ ಮತ ಪ್ರಚಾರ ನಡೆಸುತ್ತಿದ್ದು, ಅಭೂತ ಪೂರ್ವ ಜನ ಬೆಂಬಲ ವ್ಯಕ್ತವಾಗುತ್ತಿದೆ.

ನಗರ ಪಾಲಿಕೆಯ 15 ಮತ್ತು 16ನೇ ವಾರ್ಡ್‌ಗಳಲ್ಲಿ ಇಂದು ಮತ ಪ್ರಚಾರ ನಡೆಸಲಾಯಿತು. ಜೈನ್ ಲೇ-ಔಟ್‌ನಲ್ಲಿರುವ ಬನ್ನಿ ಮಹಾಂಕಾಳಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಾಗರಾಜ್ ಲೋಕಿಕೆರೆ ಮತ ಯಾಚನೆ ಪ್ರಾರಂಭಿಸಿದರು.

**ಆತ್ಮೀಯ ಸ್ವಾಗತ :** ನಾಗರಾಜ್ ಲೋಕಿಕೆರೆ ಅವರು ವಿವಿಧ ವಾರ್ಡ್‌ಗಳಲ್ಲಿ ಮತದಾರರ ಮನೆ ಬಾಗಿಲಲ್ಲಿ ಮತ ಯಾಚಿಸುತ್ತಾ ಸಾಗುತ್ತಿದ್ದಾಗ, ಕೆಲ ಮತದಾರರು, ಅಭಿಮಾನಿಗಳು, ಬೆಂಬಲಿಗರು ತಮ್ಮ ಮನೆಗೆ ಆಹ್ವಾನ ನೀಡಿ ಆತ್ಮೀಯವಾಗಿ ಸನ್ಮಾನಿಸಿ, ಗೌರವಿಸುವ ಮೂಲಕ ಸ್ವಾಗತಿಸಿ, ಬೆಂಬಲ ಸೂಚಿಸಿದರು.

**ದೃಷ್ಟಿ ತೆಗೆದು ಶುಭ ಹಾರೈಕೆ :** 15 ಮತ್ತು 16 ನೇ ವಾರ್ಡ್‌ಗಳಲ್ಲಿ ಮತ ಪ್ರಚಾರ ನಡೆಸುತ್ತಿರುವಾಗ, ಹಿರಿಯ ಮಹಿಳೆಯೋರ್ವರು ತೆರೆದ ವಾಹನವೇರಿ ಪ್ರಚಾರ ನಡೆಸುತ್ತಿದ್ದ ನಾಗರಾಜ್ ಲೋಕಿಕೆರೆ ಅವರಿಗೆ ದೃಷ್ಟಿ ತೆಗೆದು ಸ್ವಾಗತಿಸಿ, ಆಶೀರ್ವದಿಸಿ, ಶುಭ ಹಾರೈಸಿದರು.

**ಕೇಂದ್ರೀಯ ಮುಖಂಡರ ಸಾಥ್ :** 15 ಮತ್ತು 16 (3ನೇ ಪುಟಕ್ಕೆ)







## ಭದ್ರಾ ಅಚ್ಚುಕಟ್ಟು ನಾಲೆಗಳಿಗೆ ಮೇ 18 ರ ವರೆಗೆ ನೀರು

ದಾವಣಗೆರೆ, ಮೇ 5- ಬೇಸಿಗೆ ಹಂಗಾಮಿನ ಬೆಳೆಗಳಿಗೆ ಭದ್ರಾ ಅಚ್ಚುಕಟ್ಟು ನಾಲೆಗಳಲ್ಲಿ ಹರಿಸುತ್ತಿರುವ ನೀರನ್ನು ಮೇ 18 ರ ವರೆಗೆ ಹೆಚ್ಚುವರಿಯಾಗಿ ಹರಿಸಲು ತೀರ್ಮಾನಿಸಲಾಗಿದೆ. ಭದ್ರಾ ಜಲಾಶಯದಿಂದ ಭದ್ರಾ ಎಡದಂಡೆ ನಾಲೆಗೆ ಮೇ 12ರ ವರೆಗೆ ಹಾಗೂ ಬಲದಂಡೆ ನಾಲೆಗೆ ಮೇ 18ರ ವರೆಗೆ ನೀರನ್ನು ಹರಿಸಲಾಗುವುದು ಎಂದು ಕನೀನಿನಿ ಭದ್ರಾ ಯೋಜನಾ ವೃತ್ತ ಅಧೀಕ್ಷಕ ಅಭಿಯಂತರು ತಿಳಿಸಿದ್ದಾರೆ.

## ಎನ್.ಜಿ. ಶಂಕರಪ್ಪ ನಿಧನ



ದಾವಣಗೆರೆ ಪಿ.ಜೆ. ಬಡಾವಣೆಯ 4ನೇ ಮೇನ್, 8ನೇ ಕ್ರಾಸ್ ವಾಸಿ ಕೆ.ಇ.ಬಿ. ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್

**ಶ್ರೀ ಎನ್.ಜಿ. ಶಂಕರಪ್ಪ**

ಅವರು ದಿನಾಂಕ : 05.05.2023 ರ ಶುಕ್ರವಾರ ರಾತ್ರಿ 8.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 93 ವರ್ಷ ವಯಸ್ಸಾಗಿತ್ತು, ಮೃತರು ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ. ಮೃತರ ಪುತ್ರ ಅಮೇರಿಕಾದಲ್ಲಿದ್ದು, ಅವರು ಬಂದ ನಂತರ ಮೃತರ ಅಂತ್ಯಕ್ರಿಯೆಯ ದಿನಾಂಕ ಮತ್ತು ಸ್ಥಳವನ್ನು ತಿಳಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. 97401 81612

## ವಾಡಿಕೆಗಿಂತ 28% ಹೆಚ್ಚು ಮುಂಗಾರು ಪೂರ್ವ ಮಳೆ

ನವದೆಹಲಿ, ಮೇ 5 - ಇದುವರೆಗಿನ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಶೇ.28ರಷ್ಟು ಹೆಚ್ಚಾಗಿದೆ. ದೇಶದ ಮಧ್ಯ ವಲಯದಲ್ಲಿ ವಾಡಿಕೆಗಿಂತ (3ನೇ ಪುಟಕ್ಕೆ)


GURUDATT ACADEMY
Gateway to NEET & IIT
Classroom coaching for
8th, 9th, 10th std ( CBSE )
1st PUC & 2nd PUC ( NEET / JEE )
Supplementary batches.
Rangamahal, PJ Extension,
Davangere.
Call: 9739865711

# ಕಸಾಪ ಕನ್ನಡಿಗರ ಹೆಮ್ಮೆ : ಪ್ರೊ. ಭಿಕ್ಷಾವರ್ತಿಮಠ



**ಹರಿಹರದಲ್ಲಿ ಕಸಾಪ 109ನೇ ಸಂಸ್ಥಾಪನಾ ದಿನಾಚರಣೆ**

ಹರಿಹರ, ಮೇ 5- ಹರಿಹರ ತಾ. ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶುಕ್ರವಾರ ಬೆಳಿಗ್ಗೆ ಹರಿಹರ ನಗರದ ಶ್ರೀ ಗುರು ತಿಪ್ಪೇರುದ್ರ ಪ್ರೌಢಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು.

'ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡದ ಅಸ್ಮಿತೆ' ಕುರಿತು ಉಪನ್ಯಾಸ ನೀಡಿದ ಹಿರಿಯ ಸಾಹಿತಿ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ ಅವರು, 1915 ಮೇ 5 ರಂದು ಸ್ಥಾಪನೆಯಾದ ಕರ್ನಾಟಕ ಸಾಹಿತ್ಯ ಪರಿಷತ್ ನಂತರ ಕನ್ನಡ ಸಾಹಿತ್ಯ ಪರಿಷತ್ ಆಗಿ ಬೆಳೆಯಿತು.

ಕನ್ನಡ ಭಾಷೆ ಬರೀ ಸಾಹಿತಿಗಳಿಂದ ಬೆಳೆದಿಲ್ಲ. ಬದಲಾಗಿ ಕನ್ನಡ ಪರಿಚಾರಕರಿಂದಲೂ ಬೆಳೆದಿದೆ. ಕನ್ನಡ ಸಾಹಿತ್ಯ ಪರಿಷತ್ ಅಸಂಖ್ಯಾತ ಸದಸ್ಯರನ್ನು ಹೊಂದುವ ಮೂಲಕ ದೇಶದಲ್ಲಿ ಗಮನ ಸೆಳೆದಿದೆ.

ಆದರೆ ನಮ್ಮ ಜನ ಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ಕನ್ನಡಕ್ಕೆ ರಾಷ್ಟ್ರ ಮಟ್ಟದಲ್ಲಿ ಹಿನ್ನಡೆ ಆಗಿದೆ ಎಂದು ಭಿಕ್ಷಾವರ್ತಿಮಠ ಬೇಸರ ವ್ಯಕ್ತಪಡಿಸಿದರು.

ಕನ್ನಡಕ್ಕಾಗಿ ನಡೆದ ಗೋಕಾಕ್ ಚಳುವಳಿ ರಾಷ್ಟ್ರದ ಗಮನ ಸೆಳೆದಿತ್ತು. ಕನ್ನಡದ ಬಗ್ಗೆ ಹಗುರವಾಗಿ ಈ ಹಿಂದೆ ಮಾತನಾಡಿದವರು ಅಧಿಕಾರ ಕಳೆದುಕೊಂಡಿದ್ದಾರೆ.

ಹಾಗಾಗಿ ಕನ್ನಡ ನಾಡು, ನುಡಿ, ಜಲದ ವಿಷಯ ಬಂದಾಗ ಎಲ್ಲರೂ ಒಂದಾಗಿ ನಿಲ್ಲಬೇಕು. ಕನ್ನಡದ ಅಸ್ಮಿತೆಯಲ್ಲಿ ಗಡಿನಾಡು ಸಮಸ್ಯೆಗಳನ್ನು ಎದುರಿಸುವಂತಹ ಶಕ್ತಿ ಬೆಳೆಸಿಕೊಳ್ಳಬೇಕು.

ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮೊದಲಿನಿಂದಲೂ ಕೆಲಸ ಮಾಡಿಕೊಂಡು ಬಂದಿದೆ. ಕಸಾಪ ನಮ್ಮ ನಾಡಿನ ಹೆಮ್ಮೆ ಆಗಿದೆ. ಈ ಸಂಸ್ಥೆಯನ್ನು ಹುಟ್ಟುಹಾಕಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಅವರನ್ನೂ ನಾವು ಸದಾ ಸ್ಮರಿಸಬೇಕು. ಅವರ ಬಗ್ಗೆ ಇಂದಿನ ಯುವ ಪೀಳಿಗೆಗೆ ತಿಳಿಸುವ ಕೆಲಸ ಮಾಡಬೇಕೆಂದು ಭಿಕ್ಷಾವರ್ತಿಮಠ ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹರಿಹರ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಕನ್ನಡಿಗರ ಸಾರ್ವಭೌಮ, ಕನ್ನಡಿಗರ ಶಕ್ತಿ, ಕನ್ನಡಿಗರ ಹೆಮ್ಮೆಯಾಗಿ ಬೆಳೆದಿದೆ ಎಂದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಜಿಲ್ಲಾ ಕಸಾಪ ಸದಸ್ಯ ರಿಯಾಜ್ ಅಹ್ಮದ್, ಹರಿಹರ ಕಸಬಾ ಹೋಬಳಿ ಕಸಾಪ ಅಧ್ಯಕ್ಷೆ ಗೀತಾ ಕೊಂಡಜ್ಜಿ, ಈಶಪ್ಪ ಬೂದಿಹಾಳ್, ನಾಗರಾಜ್, ಕುಂಬಳೂರು ಸದಾನಂದ್, ಎಂ. ವಾಸುದೇವಮೂರ್ತಿ, ಹೀನಾ ಕೌಸರ್, ಶಿಕ್ಷಕಿ ಮಮತಾ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಲೋಕಸಭಾ ಚುನಾವಣೆ ಫಿಕ್ಸಿಂಗ್ ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ



**ಕುಮಾರಸ್ವಾಮಿ ಟಾಂಗ್**

ಬೆಂಗಳೂರು, ಮೇ 5 - ಕಳೆದ ಲೋಕಸಭೆ ಚುನಾವಣೆಯಲ್ಲಿ ಯಾವ ರೀತಿ ಮ್ಯಾಚ್ ಫಿಕ್ಸಿಂಗ್ ಆಗಿತ್ತು ಎನ್ನುವುದನ್ನು ಸ್ವತಃ ಸಿದ್ದರಾಮಯ್ಯ ಅವರೇ ಒಪ್ಪಿಕೊಂಡಿದ್ದಾರೆ. ಕೊನೆ ಪಕ್ಷ ಈಗಲಾದರೂ ಸತ್ಯ ಹೊರಬಂತಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಟಾಂಗ್ ಕೊಟ್ಟಿದ್ದಾರೆ.

ಸಂಸದೆ ಸುಮಲತಾ ಅವರನ್ನು ಗೆಲ್ಲಿಸಿ ತಪ್ಪು ಮಾಡಿದ್ದೇವೆ ಎಂದು ನಾಗಮಂಗಲದಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ನೀಡಿದ್ದ ಹೇಳಿಕೆ ಬಗ್ಗೆ ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಮೇಲಿನಂತೆ ಮಾಜಿ ಮುಖ್ಯಮಂತ್ರಿಗಳು ಉತ್ತರಿಸಿದರು.

ಈಗ ಸತ್ಯ ಹೊರಗೆ ಬಂತಲ್ಲ, ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ. ಮಂಡ್ಯದಲ್ಲಿ, ತುಮಕೂರಿನಲ್ಲಿ ಏನೇನು ಮಾಡಿದರು ಅನ್ನುವುದು ಈಗ ಅವರ ಬಾಯಿಂದಲೇ ಸತ್ಯ ಹೊರಗೆ ಬಂದಿದೆ. ಈಗ ಅದೆಲ್ಲ ಮುಗಿದು ಹೋದ ಅಧ್ಯಾಯ. ನನ್ನ ಸರ್ಕಾರ ತೆಗೆದವರೇ ಅವರು ಎಂದು ಅವರು ಹೇಳಿದರು.

ಶಾಸಕರನ್ನೇ ನೋಡಿಲ್ಲ, ಭೇಟಿ ಮಾಡಿಲ್ಲ ಅಂತ ಹೇಳುತ್ತಾರೆ ಇವರು. 19,000 ಕೋಟಿ ಅನುದಾನವನ್ನು ಕಾಂಗ್ರೆಸ್ ಪಕ್ಷದ 78 ಜನ ಶಾಸಕರಿಗೆ ನೀಡಿದ್ದೇನೆ. ಶಾಸಕರನ್ನು ಭೇಟಿ ಮಾಡದೇ ಇಷ್ಟು ಅನುದಾನ ನೀಡಲು ಸಾಧ್ಯವೇ? ಎಂದು ಅವರು ಪ್ರಶ್ನಿಸಿದರು.

ಎರಡೂ ರಾಷ್ಟ್ರೀಯ ಪಕ್ಷಗಳು ಜನರ ಸಮಸ್ಯೆ ಚರ್ಚೆ ಮಾಡುವ ಅಂಶಗಳನ್ನು ಇಟ್ಟುಕೊಂಡಿಲ್ಲ. ಕೇವಲ ಭಾವನಾತ್ಮಕ ವಿಷಯಗಳನ್ನು ಕೆದಕಿಕೊಂಡು ರಾಜಕೀಯ ಮಾಡುತ್ತಿದ್ದಾರೆ. ಇದು ಬಹಳ ದಿನ ನಡೆಯುವುದಿಲ್ಲ ಎಂದರು.

ಸ್ವಲ್ಪ ದಿನ ವಿಷಕನ್ಯೆ, ವಿಷಸರ್ಪ ಇತ್ತು, ಈಗ ಭಜರಂಗಿ ವಿಚಾರ ತಗೊಂಡು ಹೋಗುತ್ತಿದ್ದಾರೆ. ವೋಟಿಂಗ್ ದಿನ ಈ ವಿಷಯ ಮುಗಿಯುತ್ತದೆ. ಇವರು ಜನರನ್ನು ಯಾಮಾರಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು.

## ಮೇ 10 ರಂದು ಚುನಾವಣೆ

**ಮತದಾನ ಮಾಡಿ ಅಳಿಸಲಾಗದ ಶಾಯಿಯೊಂದಿಗೆ ಅತ್ಯುತ್ತಮ ಸೆಲ್ಫಿ ಕಳುಹಿಸಿದವರಿಗೆ ಬಹುಮಾನ**

ದಾವಣಗೆರೆ, ಮೇ 5- ರಾಜ್ಯ ವಿಧಾನಸಭೆಗೆ ಮೇ 10 ರಂದು ನಡೆಯುವ ಮತದಾನದಲ್ಲಿ ಕುಟುಂಬ, ಸ್ನೇಹಿತರೊಂದಿಗೆ ಮತದಾನ ಮಾಡಿ, ಅಳಿಸಲಾಗದ ಶಾಯಿ ಗುರುತಿರುವ ತೋರು ಬೆರಳು ತೋರಿಸಿರುವ ಉತ್ತಮ ಸೆಲ್ಫಿ ಕಳುಹಿಸಿದವರಿಗೆ ಬಹುಮಾನ ವಿತರಿಸಲಾಗುವುದು ಎಂದು ಜಿ. ಪಂ. ಸಿಇಒ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಇಟ್ನಾಳ್ ತಿಳಿಸಿದ್ದಾರೆ.

ಸೆಲ್ಫಿ ಕಳುಹಿಸಬೇಕಾದ ಮೊಬೈಲ್ ಸಂಖ್ಯೆ 103-ಜಗಳೂರು ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ 9743666064, 105-ಹರಿಹರ ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ-7353880396, 106-ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ 9535848675, 107-ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ 8553779938, 108-ಮಾಯಕೊಂಡ ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ 9886266610, 109-ಚನ್ನಗಿರಿ ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ 9164650505 ಹಾಗೂ 110-ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಮತದಾರರು ಮೊ.ನಂ 9980300209 ಗೆ ಮತದಾರರು ತಮ್ಮ ಹೆಸರು ಹಾಗೂ ವಿಳಾಸದೊಂದಿಗೆ ತಮಗೆ ಸಂಬಂಧಿಸಿದ ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿರುವ ಮೊಬೈಲ್ ಸಂಖ್ಯೆಗೆ ಫೋಟೋ ವಾಟ್ಸ್ ಆಪ್ ಮಾಡಬೇಕು ಎಂದು ಅವರು ತಿಳಿಸಿದ್ದಾರೆ.

# ಬಿಜೆಪಿ ಪಕ್ಷದಲ್ಲಿ ಲಿಂಗಾಯತರ ಅಸಮಾಧಾನವಿಲ್ಲ

## ಜಗಳೂರಿನಲ್ಲಿ ಎಸ್‌ವಿಆರ್ ಪರ ಪ್ರಚಾರ ಕಾರ್ಯಕ್ರಮದಲ್ಲಿ ಸಂಸದ ಸಿದ್ದೇಶ್ವರ



ಜಗಳೂರು, ಜ.5- ಬಿಜೆಪಿ ಪಕ್ಷದಲ್ಲಿ ಲಿಂಗಾಯತ ಸಮುದಾಯದವರಲ್ಲಿ ಯಾವುದೇ ಅಸಮಾಧಾನವಿಲ್ಲ. ಎಲ್ಲರೂ ಒಗ್ಗಟ್ಟಿನಿಂದ ಬಿಜೆಪಿಗೆ ಬೆಂಬಲಿಸುತ್ತಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಸ್ಪಷ್ಟನೆ ನೀಡಿದರು.

ತಾಲ್ಲೂಕಿನ ದೇವಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಚುನಾವಣೆ ಪ್ರಚಾರ ನಡೆಸಿ, ನಂತರ ಮೆದಿಕೇರನಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಬಿಜೆಪಿ ಪಕ್ಷದಲ್ಲಿ ಲಿಂಗಾಯತ ಸಮುದಾಯದವರು ಪಕ್ಷ ತೊರೆದು ಹೋಗಿಲ್ಲ, ಅಸಮಾಧಾನಗೊಂಡಿಲ್ಲ. ಅವರ ಚಿಕ್ಕಪುಟ್ಟ ಬೇಡಿಕೆಗಳನ್ನು ಸರಿಪಡಿಸಲಾಗಿದೆ.

ಚುನಾವಣೆ ಸಮಯದಲ್ಲಿ ಪಕ್ಷದಿಂದ ಸಾಮಾನ್ಯ ಕಾರ್ಯಕರ್ತರು ಹೊರಗಡೆ ಹೋಗುವುದು, ಇತರೆ ಪಕ್ಷದಿಂದ ಬಿಜೆಪಿ ಸೇರ್ಪಡೆಯಾಗುವುದು ಸಹಜ. ಇದರಿಂದ ಪಕ್ಷಕ್ಕೆ ಹಿನ್ನಡೆ ಸಾಧ್ಯವಿಲ್ಲ ಎಂದರು.

ರಾಜ್ಯದಲ್ಲಿ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಮತ್ತೊಮ್ಮೆ ಬಿಜೆಪಿ ಆಡಳಿತಕ್ಕೆ ಬರಲಿದೆ. ಜಿಲ್ಲೆಯ 7 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ.ಜಗಳೂರಿನಲ್ಲಿ ಎಸ್.ವಿ. ರಾಮಚಂದ್ರ ಅವರು 50 ಸಾವಿರ ಮತಗಳ ಅಂತರದಲ್ಲಿ ಗೆಲುವು ಖಚಿತ ಎಂದು ಸಂಸದರು ಭವಿಷ್ಯ ನುಡಿದರು.

ಕ್ಷೇತ್ರದಲ್ಲಿ ಶಾಶ್ವತ ನೀರಾವರಿ ಯೋಜನೆಗಳು ಸಾಕಾರಗೊಂಡಿವೆ. ಸಿಸಿ ರಸ್ತೆ, ಸೂರು, ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಿರುವ ಬಿಜೆಪಿ ಪಕ್ಷದ ಅಭ್ಯರ್ಥಿಗಳಿಗೆ ಮತದಾರರು ಬೆಂಬಲಿಸುವ ವಿಶ್ವಾಸವಿದೆ. ಚುನಾವಣೆ ಪ್ರಚಾರದ ವೇಳೆ ಪ್ರತಿ ಗ್ರಾಮಗಳಲ್ಲಿ ಅದ್ಧೂರಿ ಸ್ವಾಗತ, ಕಾರ್ಯಕರ್ತರ ಒಗ್ಗಟ್ಟು ನಮ್ಮಲ್ಲಿ ಉತ್ಸಾಹ ಮೂಡಿಸಿದೆ ಎಂದರು.

ಬಿಜೆಪಿ ಅಭ್ಯರ್ಥಿ ಹಾಗೂ ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಜನರು ಮತ್ತೊಮ್ಮೆ ಆಶೀರ್ವದಿಸಬೇಕು.ಸಂಸದ ಜಿ.ಎಂ.ಸಿದ್ದೇಶ್ವರ ಅವರ ಸಹಕಾರ ಹಾಗೂ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳು ಗೆಲುವಿನ ಶ್ರೀರಕ್ಷೆಯಾಗಲಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಉಸ್ತುವಾರಿ ಸಂಜೀವ್ ಪಟೇಲ್, ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ಪ.ಪಂ. ನಾಮನಿರ್ದೇಶಿತ ಸದಸ್ಯ ಬಿ.ಪಿ. ಸುಭಾನ್, ಶಿವಕುಮಾರ್ ಸ್ವಾಮಿ, ಮೆದಿಕೇರನಹಳ್ಳಿ ರಾಜಪ್ಪ, ಬಿದರಕೆರೆ ರವಿಕುಮಾರ್ ಇದ್ದರು.

## ಮಾಯಕೊಂಡದಲ್ಲಿ ಪುಷ್ಪ ವಾಗೀಶ್‌ಸ್ವಾಮಿ ಪ್ರಚಾರ



ದಾವಣಗೆರೆ, ಮೇ 5- ಮಾಯಕೊಂಡ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಶ್ರೀಮತಿ ಪುಷ್ಪ ವಾಗೀಶ್‌ಸ್ವಾಮಿ ಅವರು ಕಳೆದ 10 ದಿನಗಳಿಂದ ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ.

ಪ್ರತಿದಿನ ಕ್ಷೇತ್ರದ 8-10 ಹಳ್ಳಿಗಳಲ್ಲಿ ಸಾವಿರಾರು ಜನರೊಂದಿಗೆ ಪ್ರಚಾರ ನಡೆಸುತ್ತಿರುವ ಪುಷ್ಪ ವಾಗೀಶ್‌ಸ್ವಾಮಿ ಅವರ ಗೆಲುವು ನಮ್ಮದೇ ಎಂಬ ವಿಶ್ವಾಸದಲ್ಲಿದ್ದಾರೆ.

ಶುಕ್ರವಾರ ಕಶೆಟ್ಟಿಹಳ್ಳಿಯಲ್ಲಿ ಪತ್ನಿ ಪುಷ್ಪ ಅವರೊಂದಿಗೆ ಪ್ರಚಾರ ಭಾಷಣ ಮಾಡಿದ ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್‌ಸ್ವಾಮಿ ಅವರು, ನಮ್ಮ ಮೇಲೆ ಎಷ್ಟೇ ಆಕ್ರೋಶ ಅಥವಾ ಸುಳ್ಳು ಸುದ್ದಿಗಳನ್ನು ಹಬ್ಬಿಸಿದರೂ, ಕ್ಷೇತ್ರದ ಜನ ಮಾತ್ರ ನಮ್ಮೊಂದಿಗೆ ಬೆಂಬಲವಾಗಿದ್ದಾರೆ.

ಪ್ರತಿದಿನ ಕ್ಷೇತ್ರದಲ್ಲಿ ಜನ ಬೆಂಬಲ ಹೆಚ್ಚಾಗುತ್ತಿದ್ದು, ಕಾಂಗ್ರೆಸ್ ನಮಗೆ ಎದುರಾಳಿ ಆಗಿದೆ. ಕನಿಷ್ಠ 20 ಸಾವಿರ ಮತಗಳ ಅಂತರದಿಂದ ಗೆಲ್ಲುವ ವಿಶ್ವಾಸ ಇದೆ ಎಂದು ವಾಗೀಶ್‌ಸ್ವಾಮಿ ಹೇಳಿದರು.

# ನೇಕಾರರ ಸಮಸ್ಯೆಗಳಿಗೆ ಕಾಂಗ್ರೆಸ್‌ನಿಂದ ಸೂಕ್ತ ಪರಿಹಾರ : ಮಾಜಿ ಸಚಿವೆ ಉಮಾಶ್ರೀ



**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 5- ನೇಕಾರರಿಗೆ ಅವಶ್ಯವಿರುವ ನೂಲು ಮುಂತಾದ ಕಚ್ಚಾ ವಸ್ತು ಹಾಗೂ ಇನ್ನಿತರೆ ಅವಶ್ಯ ಸಾಮಗ್ರಿಗಳ ಸರಬರಾಜಿನಲ್ಲಿ ಆಗುತ್ತಿರುವ ಅಡೆತಡೆ ಮತ್ತು ಉತ್ಪನ್ನಗಳಿಗೆ ಯೋಗ್ಯ ಮಾರುಕಟ್ಟೆ ಬಗ್ಗೆ ಕಾಂಗ್ರೆಸ್ ಪಕ್ಷ ಬಹಳಷ್ಟು ಚಿಂತನೆ ನಡೆಸಲಿದೆ ಎಂದು ಮಾಜಿ ಸಚಿವರೂ ಆಗಿರುವ ಹಿರಿಯ ನಟಿ ಉಮಾಶ್ರೀ ಹೇಳಿದರು. ತಾಲ್ಲೂಕಿನ ತುಮ್ಮಿನಕಟ್ಟೆ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ್ ಕೋಳಿವಾಡ ಪರವಾಗಿ ಮತ ಯಾಚಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆ ಆಗಲಿದೆ. ಗುಡಿ ಕೈಗಾರಿಕೆ, ನೇಕಾರಿಕೆ ಬಗ್ಗೆ ಇರುವ ಸಮಸ್ಯೆಗಳ ಪರಿಹಾರದ ಬಗ್ಗೆ ಚಿಂತನೆ ನಡೆಸಿ ಆಯಾ ವೃತ್ತಿಪರ ಜನರ ಸಂಕಷ್ಟಗಳನ್ನು ನಿವಾರಿಸಿ ಅವರ ಅಭಿವೃದ್ಧಿಗೆ ಸೂಕ್ತ ಕ್ರಮ ಜರುಗಿಸುವಲ್ಲಿ ನಮ್ಮ ಸರ್ಕಾರ ಬದ್ಧತೆ ಹೊಂದಲಿದೆ ಎಂದು ಉಮಾಶ್ರೀ ಹೇಳಿದರು.

ಗ್ರಾಮದ ಮನೆ-ಮನೆಗೆ ತೆರಳಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವಂತೆ ಮನವಿ ಮಾಡಿದ ಉಮಾಶ್ರೀ, ಜೊತೆಗೆ ಕಾಂಗ್ರೆಸ್ ಮುಖಂಡ ರಾದ ರುಕ್ಮಿಣಿ ಸಾವುಕಾರ, ರತ್ನಾ ಪುನೀತ, ಪೂರ್ಣಿಮಾ ಕೋಳಿವಾಡ, ರಮೇಶ್ ಗಂಜಾಮದ ಮತ್ತಿತರರಿದ್ದರು.

# ಕನ್ನಡ ಪ್ರೀತಿಸಿ, ಬೇರೆ ಭಾಷೆ ದ್ವೇಷಿಸದಿರಿ

**(1ನೇ ಪುಟದಿಂದ)** ಕನ್ನಡ ಭಾಷೆಯನ್ನು 'ಜಿಲೇಬಿ ಭಾಷೆ' ಎಂದು ಬೇರೆ ರಾಜ್ಯದವರು ಹೇಳುತ್ತಾರೆ. ಅವರು ಹೇಳುವಂತೆ ಕನ್ನಡ ಮಧುರಾತಿ ಮಧುರವಾದ ಭಾಷೆ. ಕಲಿಯಲೂ ತುಂಬಾ ಸುಲಭ. ಆದ್ದರಿಂದಲೇ ಬೇರೆ ರಾಜ್ಯದವರು ಕನ್ನಡವನ್ನು ಸುಲಭವಾಗಿ ಕಲಿಯುತ್ತಾರೆ. ಮೌಂಟ್ ಅಬುವಿನಲ್ಲಿ ಕರ್ನಾಟಕದವರನ್ನು ನಾಟಕದ ನಾಯಕ ಪಾತ್ರಧಾರಿಗಳು ಎಂದು ಹೊಗಳಲಾಗುತ್ತಿದೆ ಎಂದರು.

ನಮ್ಮ ಭಾಷೆಯ ಮೇಲೆ ನಮಗೆ ಅಭಿಮಾನವಿರಬೇಕು. ಮಕ್ಕಳಿಗೆ ಈ ನಾಡಿನ ಭಾಷೆ, ಸಂಸ್ಕೃತಿ, ಸಂಸ್ಕಾರ ಕಲಿಸಬೇಕು. ಅದರೊಟ್ಟಿಗೆ ಇತರೆ ಭಾಷೆಗಳಿಗೂ ಗೌರವ ನೀಡುವುದನ್ನು ಕಲಿಯಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಕೆಲವು ಕನ್ನಡ ಹೋರಾಟಗಾರರು ಆಂಗ್ಲ ನಾಮಫಲಕಗಳಿಗೆ ಮಸಿ ಬಳಿಯುತ್ತಾರೆ. ಆದರೆ ಅವರ ಮಕ್ಕಳೇ ಇಂಗ್ಲಿಷ್ ಶಾಲೆಗಳಲ್ಲಿ ಓದುತ್ತಿರುತ್ತಾರೆ ಎಂದ ಅವರು, ನಾಮಫಲಕಗಳಲ್ಲಿ ಮೊದಲಿಗೆ ಕನ್ನಡ, ನಂತರದಲ್ಲಿ ಇಂಗ್ಲಿಷ್ ನಲ್ಲಿ ಬರೆಯಲಾಗಿರುತ್ತದೆ. ಇದು ಬೇರೆ ಪ್ರಾಂತ್ಯದವರಿಗೆ ತಿಳಿಯಲು ಸಹಕಾರಿಯಾಗುತ್ತದೆ. ಇದನ್ನು ವಿರೋಧಿಸುವುದು ಸೂಕ್ತವಲ್ಲ ಎಂದರು.

ಕನ್ನಡದ ಅಸ್ಮಿತೆ-ಕನ್ನಡ ಸಾಹಿತ್ಯ ಪರಿಷತ್ತು ಕುರಿತು ಸಾಹಿತಿ ಡಾ.ಆನಂದ ಋಗ್ವೇದಿ ಉಪನ್ಯಾಸ ನೀಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸ್ಥಾಪನೆಗೆ ಮುನ್ನ ಸಂಕಲ್ಪಿಸಿದಂತೆ ಹಲವು ಗ್ರಂಥಗಳನ್ನು ಪ್ರಕಟಿಸಿದೆ. ಬೃಹತ್ ನಿಘಂಟು ನಿರ್ಮಾಣ ಮಾಡಿದೆ. ಕನ್ನಡದ ಪ್ರಾಥಮಿಕ ಮತ್ತು ಪ್ರೌಢ ತಿಳಿವಿಗಾಗಿ ಕಾವ ಜಾಣ ರತ್ನ ಮೊದಲಾದ ಪರೀಕ್ಷೆಗಳನ್ನು ನಡೆಸುತ್ತಿದೆ.

ಕನ್ನಡ ಭಾಷೆ ನೆಲ ಜಲ ಮತ್ತು ಜನಪದ ಸಂರಕ್ಷಣೆಗಾಗಿ ಅಸಂಖ್ಯಾತ ಸಾಹಿತ್ಯ ಸಮ್ಮೇಳನಗಳನ್ನು ರಾಜ್ಯ ಜಿಲ್ಲೆ ತಾಲ್ಲೂಕು ಹೋಬಳಿ ಮಟ್ಟದಲ್ಲಿ ಸಂಘಟಿಸಿದೆ. ಅದು ಸಂಕಲ್ಪಿಸಿದ್ದ ಪಾರಿಭಾಷಿಕ ಪದಕೋಶ ನಿರ್ಮಾಣ ಈ ಹೊತ್ತಿನ ಅಗತ್ಯಗಳಿಗೆ ತಕ್ಕಂತೆ ಎಲ್ಲಾ ತಾಂತ್ರಿಕ ವಲಯಗಳಿಗೆ ವಿಸ್ತರಿಸಬೇಕಿದೆ. ಅದು ಸಾಹಿತ್ಯ ಪರಿಷತ್ತಿನ ಸಂಕಲ್ಪ. ಅದರದ್ದೇ ಜವಾಬ್ದಾರಿ ಮಾತ್ರ ಅಲ್ಲ. ಅದಕ್ಕೆ ಕನ್ನಡಿಗರಾದ ನಾವೆಲ್ಲಾ ತೊಡಗಿ ಅವಿರತ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, 1915ರ ಮೇ 5ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲ ಹಾಗೂ ಸರ್.ಎಂ. ವಿಶ್ವೇಶ್ವರಯ್ಯ, ಸರ್.ಮಿರ್ಜಾ ಇಸ್ಮಾಯಿಲ್ ಅವರ ಸಹಕಾರದಿಂದ ಕರ್ನಾಟಕ ಸಾಹಿತ್ಯ ಪರಿಷತ್ ಸ್ಥಾಪನೆಯಾಗಿತ್ತು.

108 ವರ್ಷಗಳ ಇತಿಹಾಸ ಇರುವ ಪರಿಷತ್, ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲೂ ಸಂಸ್ಥಾಪನಾ ದಿನ ಆಚರಿಸುವ ಮೂಲಕ ಪರಿಷತ್‌ನ ಹಿರಿಮೆ, ಗರಿಮೆ ತಿಳಿಸುತ್ತಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ನಿಂತ ನೀರಾಗಬಾರದು ಎಂಬ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಅವರ ನಿಲುವಿನಂತೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ ಎಂದು ಹೇಳಿದರು.

ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ ಅಧ್ಯಕ್ಷತೆ ವಹಿಸಿದ್ದರು. ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ಚಂದ್ರಿಕ ಮಂಜುನಾಥ್ ಉಪಸ್ಥಿತರಿದ್ದರು.

ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ ನಿರೂಪಿಸಿದರು. ಬಿ.ದಿಳ್ಯಪ್ಪ ಸ್ವಾಗತಿಸಿದರು. ವಿನೂತನ ಮಹಿಳಾ ಸಮಾಜದ ಸದಸ್ಯರು ನಾಡಗೀತೆ ಹಾಡಿದರು.

## ಭಜರಂಗದಳ ನಿಯಮ ಪಾಲಿಸಿದರೆ ನಿಷೇಧವಿಲ್ಲ : ವೀರಪ್ಪ ಮೊಯ್ಲಿ



ಬೆಂಗಳೂರು, ಮೇ 5 - ಭಜರಂಗದಳ ನಿಯಮಗಳನ್ನು ಪಾಲಿಸಿದರೆ ಹಾಗೂ ಸರಿಯಾಗಿ ನಡೆದುಕೊಂಡರೆ ನಿಷೇಧಿಸುವ ಪ್ರಶ್ನೆಯೇ ಬರುವುದಿಲ್ಲ ಎಂದು ಕಾಂಗ್ರೆಸ್ ಹಿರಿಯ ನಾಯಕ ಎಂ. ವೀರಪ್ಪ ಮೊಯ್ಲಿ ಹೇಳಿದರು.

ಭಜರಂಗದಳ ನಿಷೇಧಿಸುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿರುವ ಕುರಿತು ಮಾತನಾಡಿರುವ ಅವರು, ಕಾನೂನು ಹಾಗೂ ಸಂವಿಧಾನ ಪರಮೋಚ್ಛ ಎಂದು ನಾವು ಭಾವಿಸಿದ್ದೇವೆ.

ವ್ಯಕ್ತಿಗಳು ಹಾಗೂ ಸಂಘಟನೆಗಳು ಇದನ್ನು ಉಲ್ಲಂಘಿಸಬಾರದು ಎಂದವರು ಹೇಳಿದರು. ಭಜರಂಗದಳ, ಪಿಎಫ್‌ಐ ಸೇರಿದಂತೆ ಯಾವುದೇ ಸಂಘಟನೆ ದ್ವೇಷಕ್ಕೆ ಕುಮ್ಮಕ್ಕು ನೀಡಬಾರದು. ದ್ವೇಷ ಹುಟ್ಟಿಸುವ ಸಂಘಟನೆಗಳ ವಿರುದ್ಧ ಕಾನೂನು ಪ್ರಕಾರ ನಿಷೇಧದಂತಹ ಕ್ರಮ ತೆಗೆದುಕೊಳ್ಳುತ್ತೇವೆ ಎಂದವರು ತಿಳಿಸಿದರು.

## ನೂತನ ರಾಷ್ಟ್ರೀಯ ಶಿಕ್ಷಣ ನೀತಿ ರದ್ದು ಎಂದ ಕಾಂಗ್ರೆಸ್ ಪಕ್ಷಕ್ಕೆ ತರಾಟೆ



ತುಮಕೂರು, ಮೇ 5 – ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ.) ರದ್ದುಗೊಳಿಸುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಹೇಳಿರುವುದಕ್ಕೆ ಆಕ್ಷೇಪಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮಕ್ಕಳ ಭವಿಷ್ಯಕ್ಕೆ ಕಾಂಗ್ರೆಸ್ ಅಡ್ಡಿಪಡಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಮೋದಿ, ಇಂಗ್ಲಿಷ್ ಕೊರತೆ ಇರುವ, ಆರ್ಥಿಕವಾಗಿ ದುರ್ಬಲವಾದ ಸಮುದಾಯಗಳ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂದು ನೂತನ ಶಿಕ್ಷಣ ನೀತಿ ರೂಪಿಸಲಾಗಿದೆ ಎಂದು ಹೇಳಿದರು. ಆದರೆ, ಎನ್.ಇ.ಪಿ. ರದ್ದುಗೊಳಿಸಿ ಕರ್ನಾಟಕ ಶಿಕ್ಷಣ ನೀತಿ ರೂಪಿಸುವುದಾಗಿ ಕಾಂಗ್ರೆಸ್ ಹೇಳುತ್ತಿದೆ. ಇದರಿಂದ ಮಕ್ಕಳ ಭವಿಷ್ಯ ಹಾಳಾಗಲಿದೆ ಎಂದು ಮೋದಿ ಆಕ್ಷೇಪಿಸಿದರು.

ಕೇಂದ್ರದ ಬಿಜೆಪಿ ಸರ್ಕಾರವು 21ನೇ ಶತಮಾನದ ಅಗತ್ಯಗಳನ್ನು ಈಡೇರಿಸಲು ಎನ್.ಇ.ಪಿ. ರೂಪಿಸಿದೆ. ಇಸ್ರೋದ ಮಾಜಿ ಅಧ್ಯಕ್ಷ ಹಾಗೂ ಮಹಾನ್ ವಿಜ್ಞಾನಿ ಡಾ. ಕೆ. ಕಸ್ತೂರಿ ರಂಗನ್ ಅವರ ನೇತೃತ್ವದಲ್ಲಿ ಶಿಕ್ಷಣ ನೀತಿ ರೂಪಿಸಲಾಗಿದೆ. ಕರ್ನಾಟಕ ಈ ಹಿರಿಯ ವಿಜ್ಞಾನಿಯ ಕರ್ಮಭೂಮಿ ಆಗಿದೆ. ಅವರು ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರೂ ಆಗಿದ್ದರು ಎಂದು ಮೋದಿ ತಿಳಿಸಿದರು.

## ಬಾಪೂಜಿ ಬಿಐಹೆಚ್‌ಇ ಬಿಕಾಂ ಕಾಲೇಜಿನಲ್ಲಿ ಕನ್ಸೂಮರ್ ಪ್ರೊಟೆಕ್ಷನ್ ಆಕ್ಟ್ ಕಾರ್ಯಾಗಾರ




ದಾವಣಗೆರೆ, ಮೇ 5- ನಗರದ ಬಾಪೂಜಿ ಬಿಐಹೆಚ್‌ಇ ಬಿ.ಕಾಂ. ಕಾಲೇಜಿನಲ್ಲಿ ದ್ವಿತೀಯ ಹಾಗೂ ತೃತೀಯ ವರ್ಷದ ಬಿ.ಕಾಂ. ಪದವಿ ವಿದ್ಯಾರ್ಥಿಗಳಿಗೆ ಕನ್ಸೂಮರ್ ಪ್ರೊಟೆಕ್ಷನ್ ಆಕ್ಟ್ ಕುರಿತ ಕಾರ್ಯಾಗಾರ ನಡೆಯಿತು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಾಜಿ ಸದಸ್ಯರಾದ ಶ್ರೀಮತಿ ಜ್ಯೋತಿ ಆರ್. ಜಂಬಗಿ ಉಪನ್ಯಾಸ ನೀಡಿದರು.ಕಾಲೇಜಿನ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ್, ಪ್ರೊ. ಹೆಚ್. ಎಸ್. ವೀಣಾ ಮತ್ತಿತರರಿದ್ದರು.

## ನಗರದ ಎಸ್‌ಬಿಸಿ, ಅಥಣಿ ಕಾಲೇಜುಗಳಲ್ಲಿ ಇಂದು ಪದವಿ ಪ್ರದಾನ ಸಮಾರಂಭ

ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ ಇವರುಗಳ ಸಂಯುಕ್ತಾಶ್ರಯದಲ್ಲಿ ಪದವಿ ಪ್ರದಾನ ಸಮಾರಂಭವನ್ನು ಇಂದು ಬೆಳಿಗ್ಗೆ 10.30 ಕ್ಕೆ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿಸುವರು. ಡಾ. ಬಿ.ಇ. ರಂಗಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಡಾ. ಶಿವಶಂಕರ್ ಕೆ. ಆಗಮಿಸುವರು. ಡಾ. ಕೆ. ಷಣ್ಮುಖ ಪ್ರಾಸ್ತಾವಿಕ ನುಡಿಯನ್ನಾಡುವರು.

## ಹರಿಹರದಲ್ಲಿ ಬಿಜೆಪಿ ಅಭ್ಯರ್ಥಿ ಹರೀಶ್ ಪರ ಸಂಸದ ಸಿದ್ದೇಶ್ವರ ಪ್ರಚಾರ



ಹರಿಹರ, ಮೇ 5 - ಜಿಲ್ಲಾ ಪಂಚಾಯಿತಿ ಕೊಂಡಜ್ಜಿ ಕ್ಷೇತ್ರದಲ್ಲಿ ಬರುವ ಕೊಂಡಜ್ಜಿ, ಬಸಾಪುರ, ಕುರುಬರಹಳ್ಳಿ, ದೀಟೂರು, ಕರಲಹಳ್ಳಿ, ಚಿಕ್ಕಬಿದರಿ ಗ್ರಾಮಗಳಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಪರ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ ಹನಗವಾಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಹಾಗೂ ಗ್ರಾಮದ ಮುಖಂಡರು ಹಾಜರಿದ್ದರು.

## ಉತ್ತಮ ಆಡಳಿತಕ್ಕಾಗಿ ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡಿ : ಶ್ರೀನಿವಾಸ್



ದಾವಣಗೆರೆ, ಮೇ 5- ದೇಶದಲ್ಲಿ ಉತ್ತಮ ಆಡಳಿತವನ್ನು ಬಯಸುವ ನಾವುಗಳು ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡಬೇಕು ಎಂದು ದಾವಣಗೆರೆ ನಗರ ಪಾಲಿಕೆ ಉಪ ಆಯುಕ್ತ ಶ್ರೀನಿವಾಸ್ ಹೇಳಿದರು.

ಅವರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮತದಾನ ಜಾಗೃತಿ ವೇದಿಕೆ ಅಡಿಯಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳಿಗೆ ಮತದಾನ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ಸಂವಿಧಾನವು ನೀಡಿರುವ ಮುಖ್ಯವಾದ ಸಂವಿಧಾನಿಕ ಹಕ್ಕು ಮತದಾನ. ವಿದ್ಯಾರ್ಥಿಗಳು ಯುವ ಸಮೂಹವೂ ಚುನಾವಣಾ ಸಂದರ್ಭದಲ್ಲಿ ಮತದಾನವನ್ನು ಆಲಸ್ಯ ಮಾಡದೆ ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಪ್ರೊ. ಅಂಜನಪ್ಪ ಮಾತನಾಡಿ, ಚುನಾವಣೆಯನ್ನು ಹಬ್ಬದಂತೆ ಪ್ರತಿಯೊಬ್ಬರೂ ಆಚರಿಸಬೇಕು. ಮತದಾನ ನಮ್ಮ ಹಕ್ಕು ಎಂಬುದು ಎಲ್ಲರಲ್ಲೂ ಅರಿವು ಇರಬೇಕು ಹಾಗೂ ಇತರರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಐಕ್ಯೂ ಎಸಿ ಸಂಚಾಲಕ ಪ್ರೊ. ಕೆ. ನಾರಾಯಣಸ್ವಾಮಿ, ಜಿಲ್ಲಾ ನೋಡಲ್ ಅಧಿಕಾರಿ ಪ್ರೊ. ಸೋಮಶೇಖರಪ್ಪ, ಕಾಲೇಜು ಸಂಚಾಲಕ ಶಂಭುಲಿಂಗಪ್ಪ ನಲ್ಲನವರ್, ಶ್ರೀಮತಿ ಗೀತಾದೇವಿ, ಎಸ್. ವೆಂಕಟೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಪ್ರೊ. ಯಶೋಧ ಪ್ರಾರ್ಥಿಸಿದರು. ಪ್ರೊ. ಗೌರಮ್ಮ ನಿರೂಪಿಸಿದರು. ಡಾ. ಸುರೇಶ್ ಸ್ವಾಗತಿಸಿದರು.



# 10,130 ಮತದಾನ ಸಿಬ್ಬಂದಿಗೆ ಅಂತಿಮ ತರಬೇತಿ

ದಾವಣಗೆರೆ, ಮೇ 5- ಇದೇ ಮೇ 10 ರಂದು ನಡೆಯಲಿರುವ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ 10,130 ಮತದಾನ ಸಿಬ್ಬಂದಿಗೆ ಅಂತಿಮ ಹಂತದ ತರಬೇತಿಯನ್ನು ನಗರದ ವಿವಿಧೆಡೆ ನೀಡಲಾಯಿತು.

ದಾವಣಗೆರೆ ಜಿಲ್ಲೆಯ 7 ಕ್ಷೇತ್ರಗಳಲ್ಲಿ 1685 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಮತಗಟ್ಟೆ ಅಧಿಕಾರಿ ಹಾಗೂ ನಾಲ್ಕನೇ ಮತಗಟ್ಟೆ ಅಧಿಕಾರಿಗಳು ಸೇರಿದಂತೆ ಪ್ರತಿ ಮತಗಟ್ಟೆಗೆ ಮತಗಟ್ಟೆ ಅಧಿಕಾರಿ ಸೇರಿದಂತೆ 5 ಜನ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

1685 ಮತಗಟ್ಟೆಗಳಿಗೆ ಮತ್ತು ಹೆಚ್ಚುವರಿ ಸಿಬ್ಬಂದಿಯಾಗಿ ಒಟ್ಟು 10130 ಮತದಾನ ಸಿಬ್ಬಂದಿಗಳಿಗೆ ಎಲ್ಲಾ ತಾಲ್ಲೂಕುಗಳಲ್ಲಿ ಇಂದು ತರಬೇತಿ ನೀಡಲಾಯಿತು.

ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಮತಗಟ್ಟೆ ಸಿಬ್ಬಂದಿಗಳು ಮಾರ್ಗಸೂಚಿಗಳನ್ನು ಸರಿಯಾಗಿ ತಿಳಿದುಕೊಂಡು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಯಾವುದೇ ಆತುರಕ್ಕೆ ಒಳಗಾಗದೇ ಸಮಚಿತ್ತರಾಗಿ ತರಬೇತಿ ಪಡೆಯುವ ಮೂಲಕ ಗೊಂದಲಗಳನ್ನು ನಿವಾರಿಸಿಕೊಳ್ಳಬೇಕು ಎಂದರು.

ತರಬೇತಿಯಲ್ಲಿ ದಾವಣಗೆರೆ ಉತ್ತರ ಚುನಾವಣಾಧಿಕಾರಿ ಶ್ರೀನಿವಾಸ್, ದಕ್ಷಿಣದ ಚುನಾವಣಾಧಿಕಾರಿ ರೇಣುಕಾ ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಉಪಸ್ಥಿತರಿದ್ದರು.

# 15 ರಿಂದ 29ರವರೆಗೆ ನಗರದಲ್ಲಿ ಬೇಸಿಗೆ ಶಿಬಿರ

ದಾವಣಗೆರೆ, ಮೇ 5 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಬಾಲ ಭವನದ ವತಿಯಿಂದ ಬೇಸಿಗೆ ಶಿಬಿರವು ಇದೇ ದಿನಾಂಕ 15 ರಿಂದ 29 ರ ವರೆಗೆ ಜೆ.ಎಚ್. ಪಟೇಲ್ ಬಡಾವಣೆ ಬಾಲಭವನದಲ್ಲಿ ನಡೆಯಲಿದೆ.

ಇಂದಿನಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರ ಕಚೇರಿಯಲ್ಲಿ ಇದೇ ದಿನಾಂಕ 12 ರೊಳಗಾಗಿ ನೋಂದಾಯಿಸಿಕೊಳ್ಳಬೇಕು. 6 ರಿಂದ 16 ವರ್ಷದ ಮಕ್ಕಳು ಶಿಬಿರದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕುವೆಂಪು ನಗರ, 14 ನೇ ಮುಖ್ಯ ರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್ ದಾವಣಗೆರೆ ಇಲ್ಲಿಗೆ ಸಂಪರ್ಕಿಸಬಹುದೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

# ಚುನಾವಣಾ ಮಥನದ 'ವಿಷ' ಯಾರ ಪಾಲಿಗೆ?

## ರಾಜಕೀಯ ಪಕ್ಷಗಳ ಉಚಿತ ಕೊಡುಗೆಗಳಿಂದ ಹೊಡೆತ ತಿನ್ನುವವರೂ ಇದ್ದಾರೆ

**ಸಾಕಷ್ಟು ಸಮಸ್ಯೆಗಳು ಪಕ್ಷಗಳು ಉಚಿತವಾಗಿ ನೀಡುವ ಭರವಸೆಗಳಲ್ಲಿವೆ. ಎಲ್ಲಕ್ಕಿಂತ ಮುಖ್ಯವಾಗಿ, ಪುಕ್ಕಟೆಯಾಗಿ ನಗದು ಕೊಡುವುದಕ್ಕಿಂತ ಸಮಸ್ಯೆ ಇನ್ನೊಂದಿಲ್ಲ.**

ದೇವ ದಾನವರು ಸೇರಿಕೊಂಡು ಅಮೃತಕ್ಕಾಗಿ ಸಮುದ್ರ ಮಥನ ಮಾಡಿದರು ಎಂಬ ಪುರಾಣವಿದೆ. ಆದರೆ, ಈ ಮಥನದ ವೇಳೆ ಅಮೃತಕ್ಕಿಂತ ಮುಂಚೆ ವಿಷ ಹೊರ ಹೊಮ್ಮಿತ್ತು. ವಿಷಕಂಠ ಈ ವಿಷದ ಸಮಸ್ಯೆ ನಿವಾರಿಸಿದ ಮೇಲೆಯೇ ಅಮೃತ ಬಂದಿದ್ದು. ರಾಜಕೀಯ ಪಕ್ಷಗಳು ಘೋಷಿಸಿರುವ ಉಚಿತ ಕೊಡುಗೆಗಳೂ ಸಹ ಒಂದು ರೀತಿ ಚುನಾವಣಾ ಮಥನದಂತೆ ಕಾಣುತ್ತಿವೆ. ಕೊಡುಗೆಗಳು ಯಾರಿಗೆ ಎಂಬುದು ಸ್ಪಷ್ಟವಾಗಿದೆ, ಆದರೆ 'ವಿಷ' ಯಾರ ಪಾಲಿಗೆ ಸೇರಲಿದೆ ಎಂಬುದನ್ನು ಪಕ್ಷಗಳು ಯೋಚಿಸಿವೆಯೇ?

ಮತದಾನದ ದಿನ ಸಮೀಪಿಸುತ್ತಿರುವಂತೆಯೇ ರಾಜ್ಯದ ಪ್ರಮುಖ ಪಕ್ಷಗಳು ತಮ್ಮ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಭರವಸೆಗಳ ಮಹಾಪೂರವನ್ನೇ ಹರಿಸಿವೆ. ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳ ನಡುವೆ ಯಾರು ಹಿತವರು ನಮಗೆ ಎಂಬುದನ್ನು ಮಹಾಜನತೆ ನಿರ್ಧರಿಸಬೇಕಿದೆ.

ಉಚಿತ ಕೊಡುಗೆಗಳಿಂದ ಆರ್ಥಿಕತೆ ಹಾಳಾಗಿ ಪಾಕಿಸ್ತಾನವೋ ಶ್ರೀಲಂಕಾವೋ ಆಗುತ್ತೇವೆ ಎಂಬುದು ಪ್ರಜ್ಞಾವಂತರ ಚಿಂತೆ. ಆದರೆ, ಪ್ರಜ್ಞಾವಂತಿಕೆಗೂ ಚುನಾವಣೆಗೂ ಅದೆಷ್ಟರ ಮಟ್ಟಿಗೆ ಸಂಬಂಧವಿದೆಯೋ ಗೊತ್ತಿಲ್ಲ. ಆದರೆ, ಪಕ್ಷಗಳ ಭರವಸೆಗಳು ಸಮಾಜದ ಕೆಲ ವರ್ಗದ ಮೇಲೆ ನೇರ ಪರಿಣಾಮವಾಗುವ ಬಗ್ಗೆ ಈ ವರ್ಗದ ಜನರಂತೂ ಯೋಚಿಸಬೇಕಿದೆ.

**ಉದಾಹರಣೆ ಒಂದು :** ಬಿಜೆಪಿಯು ತಾನು ಅಧಿಕಾರಕ್ಕೆ ಬಂದರೆ ಬಿಪಿಎಲ್ ವರ್ಗದವರಿಗೆ ಪ್ರತಿದಿನ ಅರ್ಧ ಲೀಟರ್ ಹಾಲು ಕೊಡುವುದಾಗಿ ಹೇಳಿದೆ. ರಾಜ್ಯದ ಬಹುತೇಕ ಜನರಿಗೆ ಉಚಿತ ಹಾಲು ಸಿಗುವ ಪರಿಸ್ಥಿತಿ ಬಂದರೆ, ಹಾಲು ವಿತರಕರ ಗತಿ ಏನು? ಅಷ್ಟೇ ಅಲ್ಲದೇ, ಒಂದೆರಡು ಹಸು ಕಟ್ಟಿಕೊಂಡು ಮನೆ ಮನೆಗೆ ಹಾಲು ಮಾರುವವರ ಗತಿ ಏನು?

ಉಚಿತ ಹಾಲಿನಿಂದಾಗಿ ಈಗಿರುವ ಹಾಲು ಮಾರಾಟ ಕೇಂದ್ರಗಳ ವ್ಯಾಪಾರ ಗಣನೀಯವಾಗಿ ಕುಸಿಯಬಹುದು. ಅಲ್ಲದೇ, ಖಾಸಗಿ ಹಾಲಿನ ಸಂಸ್ಥೆಗಳಿಗೂ ಹೊಡೆತ ಬೀಳಲಿದೆ. ಖಾಸಗಿಯವರು ಹೋದರೆ ಹೋಗಲಿ ಬಿಡಿ ಎಂದಿರಾ? ಸರಿ ಬಿಡಿ. ರೈತರ ಗತಿ ಏನು? ಪ್ರಸಕ್ತ ರೈತರಿಗೆ ಹಾಲು ಮಾರಲು ಹಲವಾರು ಮಾರ್ಗಗಳಿವೆ. ಉಚಿತ ಹಾಲು ಕೊಡುವುದಾದರೆ ಕೆ.ಎಂ.ಎಫ್. ದೃಢವಾಗಿ ಉಳಿಯಲಿದ್ದು, ಉಳಿದವರ ಅಸ್ತಿತ್ವವೇ ಅಲುಗಾಡಲಿದೆ. ನಂತರ ರೈತರು ಹಾಲು ಮಾರಾಟಕ್ಕೆ ಕೆ.ಎಂ.ಎಫ್. ಒಂದನ್ನೇ ನೆಚ್ಚಿಕೊಳ್ಳಬೇಕಾಗುತ್ತದೆ. ಈ ರೀತಿಯ ಏಕಸ್ವಾಮ್ಯ ಯಾರಿಗೆ ಹಿತ?

**ಉದಾಹರಣೆ ಎರಡು :** ಕಾಂಗ್ರೆಸ್ ಪಕ್ಷವು ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ವ್ಯವಸ್ಥೆ ಕಲ್ಪಿಸುವುದಾಗಿ ಹೇಳಿದೆ. ಮಹಿಳೆಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಿದರೆ, ಅವರಷ್ಟೇ ಅಲ್ಲದೇ ಜೊತೆಗಿರುವ ಪುರುಷರೂ ಸರ್ಕಾರಿ ಬಸ್‌ಗೇ ಬರುತ್ತಾರೆ. ಒಂದಿಷ್ಟು ಕಾಸು ಉಳಿಯುವ ಅವಕಾಶ ಯಾರಿಗೆ ಬೇಡ ಹೇಳಿ?

ಹೀಗಾಗಿ ಖಾಸಗಿ ಬಸ್‌ಗಳ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಕುಸಿಯಲಿದೆ. ಆಗ ಖಾಸಗಿ ಬಸ್‌ಗಳ ಗತಿ ಏನಾಗಬೇಕು? ಖಾಸಗಿ ಬಸ್ ವಲಯದಲ್ಲೂ ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ, ಬಸ್ ಪ್ರಯಾಣ ಉಚಿತವಾದರೆ, ರೈಲುಗಳಿಗೂ ಹೊಡೆತ ಬೀಳಲಿದೆ. ಕಡಿಮೆ ಡೀಸೆಲ್ ಕುಡಿಯುವ ರೈಲಿನ ಬದಲು, ಹೆಚ್ಚು ಡೀಸೆಲ್ ಕುಡಿಯುವ ಬಸ್‌ಗಳ ಮೊರೆ ಹೋಗುವುದು ಪರಿಸರಕ್ಕೆ ಎಷ್ಟು ಹಿತ?

**ಉದಾಹರಣೆ ಮೂರು :** ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ ಮಾಡುವುದಾಗಿ ಜೆಡಿಎಸ್ ಘೋಷಿಸಿದೆ. ಇದುವರೆಗೂ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ತಮ್ಮದೇ ಆದ ರೀತಿಯಲ್ಲಿ ಸ್ವಾವಲಂಬನೆ ಕಂಡುಕೊಂಡಿದ್ದವು. ಒಂದು ಬಾರಿ ಸರ್ಕಾರ ಸಾಲ ಮನ್ನಾ ಮಾಡಿದರೆ, ಮುಂದೆ ಮತ್ತೆ ಸಾಲ ಮನ್ನಾ ಆಗಬಹುದು ಎಂಬ ಯೋಚನೆ ಬರುವುದಿಲ್ಲ ಎಂದು ಏನು ಗ್ಯಾರಂಟಿ?

ಈಗಾಗಲೇ ಸರ್ಕಾರಿ ನಿಗಮಗಳ ಮೂಲಕ ನೀಡಲಾಗುವ ಸಾಲ ವಸೂಲಿ ಮಾಡುವುದೇ ಕಠಿಣವಾಗಿದೆ. ಯಾವುದೋ ಒಂದು ಕಾಲದಲ್ಲಿ ಸಾಲ ಮನ್ನಾ ಮಾಡಿದ ಕಾರಣದಿಂದ, ಮತ್ತೆ ಮನ್ನಾ ಆಗಬಹುದು ಎಂದು ಸಾಲ ಪಡೆದವರು ಕಾಯುತ್ತಿರುತ್ತಾರೆ. ಇದೇ ಪರಿಸ್ಥಿತಿ ಸ್ತ್ರೀಶಕ್ತಿ ಸಂಘಗಳಿಗೂ ಬರುವುದಿಲ್ಲ ಎಂಬ ಗ್ಯಾರಂಟಿ ಏನು?

ಇಂತಹ ಸಾಕಷ್ಟು ಸಮಸ್ಯೆಗಳು ಪಕ್ಷಗಳ ಭರವಸೆಗಳಲ್ಲಿವೆ. ಎಲ್ಲಕ್ಕಿಂತ ಮುಖ್ಯವಾಗಿ, ಪುಕ್ಕಟೆಯಾಗಿ ನಗದು ಕೊಡುವುದಕ್ಕಿಂತ ಸಮಸ್ಯೆ ಇನ್ನೊಂದಿಲ್ಲ. ಜನರನ್ನು ಉತ್ಪಾದನೆಯಲ್ಲಿ ತೊಡಗಿಸಿ ಅದಕ್ಕಾಗಿ ಹಣ ಕೊಡಬೇಕು. ಆಗ ಆರ್ಥಿಕತೆಯಲ್ಲಿ ನಗದು ಬರುತ್ತದೆ, ಉತ್ಪನ್ನಗಳೂ ಬರುತ್ತವೆ. ಅದರ ಬದಲು, ಉತ್ಪಾದನೆಯನ್ನೇ ಮಾಡಿಸದೇ ಕೇವಲ ಹಣ ಕೊಟ್ಟರೆ, ಮಾರುಕಟ್ಟೆಯಲ್ಲಿ ಹಣ ಬರುತ್ತದೆ ಉತ್ಪನ್ನಗಳು ಹೆಚ್ಚಾಗುವುದಿಲ್ಲ. ಇದರಿಂದ ವಸ್ತುಗಳ ಬೆಲೆ ಹೆಚ್ಚಾಗಿ ನೂರೆಂಟು ಸಮಸ್ಯೆ.

ಮನೆಗಳಿಗೆ ಉಚಿತ ವಿದ್ಯುತ್ ಕೊಟ್ಟರೆ ದುರ್ಬಳಕೆ ಹೆಚ್ಚಾಗುವ ಅಪಾಯ. ಹೊಲಗಳಿಗೆ ಉಚಿತ ವಿದ್ಯುತ್ ಅಂತರ್ಜಲ ಅತಿ ಬಳಕೆಯಾಗುವ ಅಪಾಯ. ಹೀಗೆ ಪ್ರತಿಯೊಂದು ಉಚಿತ ಕೊಡುಗೆಯೂ ಆಯಾ ವಲಯಗಳಿಗೆ ಅಪಾಯ ತರುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಪಕ್ಷಗಳು ಅಧ್ಯಯನ ಮಾಡಿವೆಯೋ ಬಿಟ್ಟಿವೆಯೋ ಗೊತ್ತಿಲ್ಲ. ಮಹಾಜನತೆ ಮಾತ್ರ ಯೋಚಿಸಬೇಕಿದೆ.

**- ಜಿ.ಎನ್. ಕಾಮತ್, ದಾವಣಗೆರೆ**

# ಹೆಚ್ಚು ಮುಂಗಾರು ಮಳೆ

**(1ನೇ ಪುಟದಿಂದ)** ಶೇ.268ರಷ್ಟು ಹೆಚ್ಚು ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಪೂರ್ವ ಹಾಗೂ ಈಶಾನ್ಯದಲ್ಲಿ ಶೇ.29ರಷ್ಟು ಕೊರತೆಯಾಗಿದೆ. ಮಾರ್ಚ್ 1ರಿಂದ ಮೇ 3ರವರೆಗಿನ ಮಳೆಯನ್ನು ಆಧರಿಸಿ ಈ ವರದಿ ರೂಪಿಸಲಾಗಿದೆ.

ಮಧ್ಯಪ್ರದೇಶ, ಛತ್ತೀಸ್‌ಘಡ, ಒಡಿಶಾ ಹಾಗೂ ಮಹಾರಾಷ್ಟ್ರಗಳಲ್ಲಿ ವಾಡಿಕೆಯ 18.2 ಮಿ.ಮೀ. ಬದಲು 67 ಮಿ.ಮೀ. ಮಳೆಯಾಗಿದೆ. ಪೂರ್ವ ಹಾಗೂ ಈಶಾನ್ಯದಲ್ಲಿ 199.9 ವಾಡಿಕೆ ಮಳೆ ಇದ್ದರೆ, ಈ ಬಾರಿ 141.5 ಮಿ.ಮೀ. ಮಳೆಯಾಗಿದೆ. ಏಪ್ರಿಲ್ 21-22ರ ನಂತರ ಈಶಾನ್ಯ, ಪೂರ್ವ ಭಾಗಗಳ ಹೊರತು ಪಡಿಸಿ ಉಳಿದೆಡೆ ವ್ಯಾಪಕ ಮಳೆಯಾಗಿದೆ. ಹೀಗಾಗಿ ಏಪ್ರಿಲ್ 21ರ ನಂತರ ದೇಶದಲ್ಲಿ ಎಲ್ಲೂ ಬಿಸಿಗಾಳಿಯ ವಾತಾವರಣ ಕಂಡು ಬಂದಿಲ್ಲ.

ಏಪ್ರಿಲ್-ಮೇ ತಿಂಗಳ ಈ ಅವಧಿಯಲ್ಲಿ ಇಷ್ಟು ದೀರ್ಘ ಕಾಲ ಬಿಸಿಗಾಳಿ ಕಂಡು ಬರದೇ ಇರುವುದು ಅಪರೂಪ ಎಂದು ಹವಾಮಾನ ಇಲಾಖೆ ತಿಳಿಸಿದೆ. ಭಾರತದಲ್ಲಿ ಮೇ ತಿಂಗಳಲ್ಲಿ ಬಿಸಿಗಾಳಿಯ ಪ್ರಮಾಣ ಹೆಚ್ಚಾಗಿರುತ್ತದೆ. ಈ ಅವಧಿಯಲ್ಲಿ ಉತ್ತರ, ವಾಯುವ್ಯ ಹಾಗೂ ಮಧ್ಯ ಭಾಗಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿನ ಹಂತಕ್ಕೆ ತಲುಪುತ್ತದೆ.

# ಕೊರೊನಾ ತುರ್ತು ಪರಿಸ್ಥಿತಿ ಅಲ್ಲ

**(1ನೇ ಪುಟದಿಂದ)** ಏಷಿಯಾ ಹಾಗೂ ಮಧ್ಯ ಪ್ರಾಚ್ಯದಲ್ಲಿ ಇತ್ತೀಚೆಗೆ ಸೋಂಕು ಪ್ರಕರಣಗಳು ಹೆಚ್ಚಾಗಿದ್ದವು ಎಂದು ವಿಶ್ವ ಆರೋಗ್ಯ ಸಂಘಟನೆ ಹೇಳಿದೆ. ಕಳೆದ ವರ್ಷದಿಂದ ಇಳಿಮುಖವಾಗಿದೆ. ಬಹುತೇಕ ದೇಶಗಳು ಕೊರೊನಾಗೆ ಮುಂಚಿನ ಸ್ಥಿತಿಗೆ ಮರಳಿವೆ ಎಂದೂ ಸಂಘಟನೆ ತಿಳಿಸಿದೆ.

# ನೀಟ್ ಪರೀಕ್ಷೆ : ಪ್ರಧಾನಿ ರೋಡ್ ಶೋ ಬದಲಾವಣೆ

## ಬೆಂಗಳೂರಿನಲ್ಲಿ ಆಯೋಜಿಸಲಾಗಿರುವ 2 ದಿನದ ಚುನಾವಣಾ ಪ್ರಚಾರದ ರೋಡ್ ಶೋ



ಬೆಂಗಳೂರು, ಮೇ 5 - ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ನಾಯಕರ ರೋಡ್ ಶೋ ಇಲ್ಲವೇ ಸಭೆಗಳಿಂದ ನೀಟ್ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಸರ್ಕಾರ ಮತ್ತು ಬಿಜೆಪಿ ಪಕ್ಷ ಎಚ್ಚೆತ್ತುಕೊಂಡಿವೆ.

ರಾಜ್ಯದ ನಾಲ್ಕು ಪ್ರಮುಖ ನಗರಗಳಲ್ಲಿ ವೈದ್ಯಕೀಯ ಶಿಕ್ಷಣ ಪ್ರವೇಶ ಪರೀಕ್ಷೆ (ನೀಟ್) ನಡೆಯುತ್ತಿದ್ದು, ಈ ಸಂದರ್ಭದಲ್ಲಿ ರ‍್ಯಾಲಿಗಳಿಂದ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಅದರಲ್ಲೂ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಭದ್ರತಾ ದೃಷ್ಟಿಯಿಂದ ಸಮಸ್ಯೆ ಯಾಗಲಿದೆ ಎಂಬ ಆರೋಪಗಳು ಕೇಳಿ ಬಂದವು.

ಇದರಿಂದ ಎಚ್ಚೆತ್ತ ಸರ್ಕಾರ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ತೊಂದರೆಯಾಗ ದಂತೆ ನೋಡಿಕೊಳ್ಳಲು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಮತ್ತೊಂದೆಡೆ ರಾಜಕೀಯ ಪಕ್ಷಗಳು ವಿದ್ಯಾರ್ಥಿಗಳ ಸಹಾಯಕ್ಕೆ ಬಂದಿವೆ.

ಪ್ರಧಾನಿ ಮೋದಿ ಅವರು, ಎರಡು ದಿನಗಳ ಕಾಲ ನಾಳೆಯಿಂದ ಬೆಂಗಳೂರಿನಲ್ಲಿ ಬೃಹತ್ ರೋಡ್ ಶೋ ನಡೆಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ಸಾರ್ವಜನಿಕ ವಲಯದಲ್ಲಿ ಅಭಿಪ್ರಾಯ ಕೇಳಿ ಬಂದಿತ್ತು. ಜೊತೆಗೆ ಈ ವಿಚಾರ ಹೈಕೋರ್ಟ್ ಮೆಟ್ಟಿಲೇರಿದೆ. ಇದನ್ನು ಗಮನದಲ್ಲಿರಿಸಿಕೊಂಡ ರಾಜ್ಯ ಬಿಜೆಪಿ ನರೇಂದ್ರ ಮೋದಿ ಅವರ 'ನಮ್ಮ ಬೆಂಗಳೂರು, ನಮ್ಮ ಹೆಮ್ಮೆ' ಬೃಹತ್ ರೋಡ್ ಶೋ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಿದೆ.

ಅಷ್ಟೇ ಅಲ್ಲ ರಾಜ್ಯದ ವಿವಿಧ ಭಾಗಗಳಲ್ಲೂ ಪರೀಕ್ಷಾ ಕೇಂದ್ರಗಳ ಸಮೀಪ ಇಂತಹ ರ‍್ಯಾಲಿ ಹಾಗೂ ಸಭೆಗಳಿಗೆ ಕಡಿವಾಣ ಹಾಕಿದ್ದೇವೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾನುವಾರ ಮಧ್ಯಾಹ್ನ ನೀಟ್ ಪರೀಕ್ಷೆ ಇರುವುದರಿಂದ ಕಾರ್ಯಕ್ರಮ ದಲ್ಲಿ ಬದಲಾವಣೆ ಮಾಡಲಾಗಿದೆ. ಮಕ್ಕಳ ಶಿಕ್ಷಣ ಮತ್ತು ಭವಿಷ್ಯದ ಬಗ್ಗೆ ವಿಶೇಷ ಕಳಕಳಿ ಹೊಂದಿರುವ ಪ್ರಧಾನ ಮಂತ್ರಿ ಯವರು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ತೊಂದರೆ ಯಾಗದಂತೆ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡಲು ಸೂಚಿಸಿದ್ದಾರೆ ಎಂದರು.

ಭಾನುವಾರ ಯಾವುದೇ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದರೆ ಅಂತಹ ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಿದರೆ, ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಿಗೆ ಪೊಲೀಸರು ಬಿಡುತ್ತಾರೆ. ಈ ಕುರಿತಂತೆ ಪೊಲೀಸರೊಂದಿಗೆ, ಎಸ್‌ಪಿಜಿಯವರೊಂದಿಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು.

ನಾಳೆಯ ರೋಡ್ ಶೋಗೆ ಅಡ್ಡಿಪಡಿಸಲು ಕಾಂಗ್ರೆಸ್ ಷಡ್ಯಂತ್ರ ಮಾಡುತ್ತಿದೆ. ಅವರದೇ ಕಾರ್ಯಕರ್ತರ ಆಂಬ್ಯುಲೆನ್ಸ್‌ಗಳನ್ನು ರೋಡ್ ಶೋ ಮಾರ್ಗದಲ್ಲಿ ಓಡಿಸುವುದಾಗಿ ತಿಳಿದು ಬಂದಿದೆ. ಈ ನಿಟ್ಟಿನಲ್ಲಿ ರೋಗಿಗಳಿರುವ ಆಂಬ್ಯುಲೆನ್ಸ್‌ಗಳನ್ನು ಪೊಲೀಸರು ಖುದ್ದು ಆಸ್ಪತ್ರೆಗಳವರೆಗೆ ಬಿಡುವಂತೆ ಮನವಿ ಮಾಡಲಾಗಿದೆ ಎಂದು ಶೋಭಾ ಕರಂದ್ಲಾಜೆ ತಿಳಿಸಿದರು.

ಪ್ರಧಾನಮಂತ್ರಿಯವರು ನಾಳೆ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಬೆಂಗಳೂರು ದಕ್ಷಿಣದ ಸೋಮೇಶ್ವರ ಭವನ ಆರ್‌ಬಿಐ ಮೈದಾನ ದಿಂದ ಮಲ್ಲೇಶ್ವರದ ಸ್ಯಾಂಕಿ ಟ್ಯಾಂಕ್ ವರೆಗೆ 26.5 ಕಿ.ಮೀ ರೋಡ್ ಶೋ ನಡೆಸುತ್ತಾರೆ. ನಾಡಿದ್ದು ಭಾನುವಾರ ಬೆಳಿಗ್ಗೆ 10ರಿಂದ ತಿಪ್ಪಸಂದ್ರದ ಕೆಂಪೇಗೌಡ ಪ್ರತಿಮೆಯಿಂದ ಟ್ರಿನಿಟಿ ವೃತ್ತದ ವರೆಗೆ 8 ಕಿ.ಮೀ ರೋಡ್ ಶೋ ನಡೆಸಲಿದ್ದಾರೆ.

ಒಂದೇ ದಿನ ರೋಡ್ ಶೋ ನಡೆಸಿದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಎರಡು ದಿನ ರೋಡ್ ಶೋ ನಡೆಸಲಾಗುತ್ತಿದೆ ಎಂದು ಕರಂದ್ಲಾಜೆ ತಿಳಿಸಿದರು.

# 39, 40, 41ನೇ ವಾರ್ಡುಗಳಲ್ಲಿ ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ, ಮೇ 5- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಬಿರುಸಿನ ಮತ ಪ್ರಚಾರ ನಡೆಸಿದರು. ವಿದ್ಯಾನಗರ ಕಾಫಿ ಡೇಯಿಂದ ಮತ ಪ್ರಚಾರ ಆರಂಭಿಸಿದ ನಾಗರಾಜ್ ಲೋಕಿಕೆರೆ ಅವರು 39, 40 ಮತ್ತು 41ನೇ ವಾರ್ಡ್‌ಗಳಲ್ಲಿ ತೆರೆದ ವಾಹನದಲ್ಲಿ ಮತ ಯಾಚಿಸಿದರು.

ಬಿಜೆಪಿ ಮುಖಂಡರುಗಳಾದ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಡಿ.ಎಸ್. ಶಿವಶಂಕರ್, ವೀಣಾ ನಂಜಪ್ಪ, ಗೀತಾ ದಿಳ್ಯಪ್ಪ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಸಾಥ್ ನೀಡಿ ನಾಗರಾಜ್ ಲೋಕಿಕೆರೆ ಪರ ಮತ ಯಾಚಿಸಿದರು.

**ಸನ್ಮಾನದ ಸುರಿಮಳೆ :** ಸಂಜೆ ವೇಳೆ ವಿವಿಧ ವಾರ್ಡ್‌ಗಳಲ್ಲಿ ಮತ ಪ್ರಚಾರ ನಡೆಸುವಾಗ ಮತದಾರರು, ಬೆಂಬಲಿಗರಿಂದ ನಾಗರಾಜ್ ಲೋಕಿಕೆರೆ ಅವರಿಗೆ ಬೃಹತ್ ಹೂ ಮಾಲೆ ಹಾಕಿ, ಶಾಲು ಹೊದಿಸಿ, ಸನ್ಮಾನಿಸಿ ಗೌರವಿಸಲಾಯಿತು.

# ಕಂಪನಿಗಳ ಆರಂಭಕ್ಕೆ ಪ್ರಾಮಾಣಿಕ ಪ್ರಯತ್ನ



**(1ನೇ ಪುಟದಿಂದ)** ತಿಳಿಸಿದರು.

ಈ ಬಾರಿಯ ಚುನಾವಣೆಯಲ್ಲಿ ನನಗೆ ಆಶೀರ್ವಾದ ಮಾಡಿ ಗೆಲ್ಲಿಸಿ, ಅಭಿವೃದ್ಧಿಯ ಕೆಲಸವನ್ನು ಹಿಂದಿಗಿಂತಲೂ ಹೆಚ್ಚಿನ ವೇಗದಲ್ಲಿ ಮಾಡುವುದಾಗಿ ಎಸ್ಸೆಸ್ಸೆಂ ಭರವಸೆ ನೀಡಿದರು.

ಮಲ್ಲಿಕಾರ್ಜುನ್ ಅವರು ರೋಡ್ ಶೋ ಮೂಲಕ ಮತಯಾಚನೆ ಮಾಡಲು ಆಗಮಿಸಿದಾಗ ಬಡಾವಣೆ ನಾಗರಿಕರು ಪುಷ್ಪವೃಷ್ಟಿ ಮೂಲಕ ಸ್ವಾಗತಿಸಿದರು. ಶಾಲು ಹೊದಿಸಿ ಸನ್ಮಾನಿಸಿ, ಗೌರವಿಸಿದರು. ಮಹಿಳೆಯರು ಕಳಸದಾರತಿ ಬೆಳಗಿದರು. ಅಪಾರ ಸಂಖ್ಯೆಯಲ್ಲಿ ಮಲ್ಲಿಕಾರ್ಜುನ್ ಅಭಿಮಾನಿಗಳು ಭಾಗವಹಿಸಿದ್ದರು.

ವಿವೇಕಾನಂದ ಮತ್ತು ವಿನಾಯಕ ಬಡಾವಣೆಗಳಲ್ಲಿ ಮಾಕನೂರು ರಾಜಶೇಖರ್, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಶಾಮನೂರು ಟಿ.ಬಸವರಾಜ್, ಪಕ್ಷದ ಮುಖಂಡರಾದ ಅನಿಲ್‌ಗೌಡ, ಶಾಮನೂರು ಸಿದ್ದಪ್ಪ, ಉಮೇಶ್ ಪಾಟೀಲ್, ವಿರೇಶ್ ಪಾಟೀಲ್, ಕೆ.ಸಿ.ಚೆನ್ನಪ್ಪ, ದಿನೇಶ್ ಪಾಟೀಲ್, ಕೆ. ಎಸ್. ಈಶ್ವರಪ್ಪ, ಹನುಮನ ಹಳ್ಳಿ ನಾಗೇಂದ್ರ, ಮಂಜುನಾಥ್ ಕುರ್ಕಿ, ರಂಗನಾಥ ಸ್ವಾಮಿ, ಮಧು, ನವೀನ್, ರಮೇಶ್ ಬಿ.ಜೆ., ಸುನಿಲ್ ಬಿ.ಜೆ., ನಟರಾಜ್, ಮಂಜುನಾಥ್, ಬಾಡದ ರವಿ, ದೀಪು, ಲೋಹಿತ್, ಅರವಿಂದ ಬಾಬು, ಉಮೇಶ್, ಸಿದ್ದೇಶ್, ಕುಸುಮ ಲೋಕೇಶ್, ಪಲ್ಲವಿ ಪಾಟೀಲ್, ಶೀಲಾ ಗೌಡ, ವಿಜಯ ಅಕ್ಕಿ ಮತ್ತಿತರರು ಅಭ್ಯರ್ಥಿ ಜೊತೆ ಪ್ರಚಾರ ಮಾಡಿದರು.

ಎಂ.ಸಿ. ಕಾಲೋನಿಯಲ್ಲಿ ನಡೆದ ರೋಡ್ ಶೋ ನಲ್ಲಿ ಪಾಲಿಕೆ ಸದಸ್ಯ ಗಡಿಗುಡಾಳು ಮಂಜುನಾಥ್, ಆಲೂರು ಜ್ಯೋತಿಲಿಂಗ, ಸತ್ಯನಾರಾಯಣ, ಎನ್. ಜಿ.ಪುಟ್ಟಸ್ವಾಮಿ, ವಿರೂಪಾಕ್ಷಪ್ಪ ಕುಂಬಳೂರು, ಚಂದನ್ ಪಲ್ಲಾಗಟ್ಟೆ, ರವಿಕುಮಾರ್, ಮಂತ್ರಿ ಮುರುಗೇಶ್, ಮಂಜುಳಾ ಬಸವಲಿಂಗಪ್ಪ, ಪುಷ್ಪ ಸುರೇಶ್, ಫಜ್ಲು ರೆಹಮಾನ್ ಮಂಜುನಾಥ ಉಪ್ಪಾರ್, ಗ್ಲಾಸ್ ಗೌಡ, ಸುಮ ಪಾಟೀಲ್, ಯಶೋಧ, ಚೆನ್ನಪ್ಪ, ಬಾಳೇಹೊಲದ ಕಿರಣ್, ಧರಣೇಂದ್ರ, ಹಾಲಿನಗೌಡ್ರು ಮತ್ತಿತರರು ಮಲ್ಲಿಕಾರ್ಜುನ್ ಅವರಿಗೆ ಸಾತ್ ನೀಡಿದರು.

# ನೀತಿ ಸಂಹಿತೆ ಉಲ್ಲಂಘನೆ; 11.425ಲೀ. ಮದ್ಯ ವಶ

ದಾವಣಗೆರೆ, ಮೇ 5- ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಲ್ಲಿದ್ದು, ಜಿಲ್ಲೆಯಾದ್ಯಂತ ಕಟ್ಟುನಿಟ್ಟಿನ ಚೆಕ್‌ಪೋಸ್ಟ್ ವ್ಯವಸ್ಥೆ ಮಾಡಲಾಗಿದೆ. ಮೇ 04 ರಂದು ರೂ. 5244 ಮೌಲ್ಯದ 11.425 ಲೀ. ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ಇದುವರೆಗೆ ರೂ.9474057 ನಗದು, ರೂ.31718552.99 ಮೌಲ್ಯದ 47282.045 ಲೀ ಮದ್ಯ, 3.853 ಕೆ.ಜಿ ಮಾದಕ ವಸ್ತು ಅಂದಾಜು ಮೌಲ್ಯ ರೂ.71610, ರೂ.8498048 ಮೌಲ್ಯದ ಕುಕ್ಕರ್ ಸೇರಿದಂತೆ ಇತರೆ ವಸ್ತುಗಳು ಒಟ್ಟು ರೂ.4.97 ಕೋಟಿಯಷ್ಟು ನಗದು ಮತ್ತು ಇತರೆ ವಸ್ತುಗಳನ್ನು ನೀತಿ ಸಂಹಿತೆ ಆರಂಭವಾದಾಗಿನಿಂದ ಇಲ್ಲಿಯವರೆಗೆ ವಶಪಡಿಸಿಕೊಳ್ಳಲಾಗಿದೆ.

ಮೇ 04 ರಂದು 11.425 ಲೀ ಮದ್ಯವನ್ನು ಅಬಕಾರಿ ಇಲಾಖೆಯಿಂದ ಕಾರ್ಯಾಚರಣೆ ಮಾಡಿ ವಶಪಡಿಸಿಕೊಳ್ಳಲಾಗಿದೆ.

# ಬೆಳವನೂರು ಸುತ್ತಮುತ್ತ ಗ್ರಾಮಗಳಲ್ಲಿ ಇಂದು ಎಸ್ಸೆಸ್ ಪರ ಎಸ್ಸೆಸ್ಸೆಂ ಪ್ರಚಾರ




ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರ ಪರ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಇಂದು ಪ್ರಚಾರ ನಡೆಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸಿ.ನಿಂಗಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಹೊಸಬೆಳವನೂರು, ಹಳೇಬೆಳವ ನೂರು, ಚಂದ್ರೇನಹಳ್ಳಿ, ಬುಳ್ಳಾಪುರ ಕ್ಯಾಂಪ್, ತುರ್ಚಘಟ್ಟ, ಹೊಸನಾಯ್ಕನಹಳ್ಳಿ, ಕೈದಾಳೆ, ಕುಕ್ಕುವಾಡ ಹೊಸಕೊಳೇನಹಳ್ಳಿ, ನಾಗರಸನಹಳ್ಳಿ, ಜಡಗನಹಳ್ಳಿ, ಬಲ್ಲೂರು ಮಟ್ಟಿ, ಬಲ್ಲೂರು, ಶಿರಗಾನಹಳ್ಳಿ, ಕನಗೊಂಡನಹಳ್ಳಿ, ಹದಡಿ, ಬಟ್ಲಕಟ್ಟೆ, ಮುದಹದಡಿ, ಜರೀಕಟ್ಟೆ, ದುರ್ಗಾಂಬಿಕ ಕ್ಯಾಂಪ್, ಬಿಸಲೇರಿ, ತರಳಬಾಳು ನಗರ (6ನೇ ಮೈಲಿ ಕಲ್ಲು), ಶಿರಮಗೊಂಡನಹಳ್ಳಿ, ನಾಗನೂರು ಗ್ರಾಮಗಳಲ್ಲಿ ಪ್ರಚಾರ ನಡೆಸುವರು.

# ಡಿಸಿಎಂ ಟೌನ್‌ಶಿಪ್ ನಾಗರಿಕ ಸಮಿತಿ ಅಧ್ಯಕ್ಷರಾಗಿ ಕೆ.ಹಾಲಪ್ಪ ಪುನರಾಯ್ಕೆ





ದಾವಣಗೆರೆ, ಮೇ 5- ನಗರದ ಡಿಸಿಎಂ ಟೌನ್‌ಶಿಪ್‌ನ ನಾಗರಿಕ ಸಂಘದ ಸರ್ವ ಸದಸ್ಯರ ಮಹಾಸಭೆಯು ಇತ್ತೀಚೆಗೆ ಡಿಸಿಎಂನ ಶ್ರೀ ಚೌಡೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ನಡೆದಿದ್ದು, ಸಮಿತಿಯ ಅಧ್ಯಕ್ಷರಾಗಿ ಕೆ.ಹಾಲಪ್ಪ ಸರ್ವಾನುಮತದಿಂದ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ ಎಂದು ಸಮಿತಿಯ ಹಿರಿಯರಾದ ಅಕ್ಕಿ ವೀರಭದ್ರಪ್ಪ ತಿಳಿಸಿದ್ದಾರೆ.

ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಶಿವನಪ್ಪ, ಖಜಾಂಚಿಯಾಗಿ ಡಿ.ಹೆಚ್.ಚನ್ನಬಸಪ್ಪ, ಗೌರವ ಅಧ್ಯಕ್ಷರಾಗಿ ಮೂಡಲಗಿರಿಯಪ್ಪ, ಉಪಾಧ್ಯಕ್ಷರಾಗಿ ಶ್ರೀಮತಿ ಶಾರದಮ್ಮ ಶಿವನಪ್ಪ, ಮಂಜುನಾಥ ರೆಡ್ಡಿ ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಎಸ್. ಶಾರದಮ್ಮನವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಗೆ ನಿರಂಜನ್ ಸ್ವಾಗತಿಸಿದರು. ಮಂಜುನಾಥ ರೆಡ್ಡಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಾರ್ಷಿಕ ಲೆಕ್ಕಪತ್ರ ಮಂಡಿಸಿ ಅನುಮೋದನೆ ಪಡೆದರು. ದ್ಯಾಮನಗೌಡ ಕಾರ್ಯಕ್ರಮ ನಿರೂಪಿಸಿ, ಬಸವರಾಜ ಅಂಗಡಿ ವಂದಿಸಿದರು.

# ನಾಗರಾಜ್ ಲೋಕಿಕೆರೆಗೆ ಕೇಂದ್ರ ನಾಯಕರ ಸಾಥ್



**(1ನೇ ಪುಟದಿಂದ)** ನೇ ವಾರ್ಡ್‌ಗಳಲ್ಲಿನ ಮತ ಪ್ರಚಾರಕ್ಕೆ ನಾಗರಾಜ್ ಲೋಕಿಕೆರೆ ಅವರೊಂದಿಗೆ ಬಿಜೆಪಿ ಪಕ್ಷದ ಕೇಂದ್ರೀಯ ಮುಂಖಡರುಗಳಾದ ಜೀತು ಬಾಯಿ ವಾಗ್ಮೀ ಮತ್ತು ಕಾಟೀ ಬಾಯ್ ಅಮೃತ್ಯ್ ಅವರುಗಳು ಸಾಥ್ ನೀಡಿ ಮತ ಯಾಚಿಸಿದರು.

ನಿಮ್ಮೆಲ್ಲರ ಅಮೂಲ್ಯವಾದ ಮತವನ್ನು ಜನರಿಗೆ ಸೇವೆ ನೀಡುವ, ಜನಪರ ಕಾಳಜಿಯುಳ್ಳ ಅಭ್ಯರ್ಥಿಗಳಿಗೆ ನೀಡಿದರೆ ಸಾರ್ಥಕವಾಗುತ್ತದೆ. ಆದ್ದರಿಂದ ಇಂತಹ ಗುಣಗಳುಳ್ಳ ನಾಗರಾಜ್ ಲೋಕಿಕೆರೆ ಅವರು ಜನ ಸೇವೆಗಾಗಿ ಜನರ ಬಳಿ ಮತ ಯಾಚಿಸುತ್ತಿದ್ದು, ಅವರಿಗೊಂದು ಅವಕಾಶ ನೀಡಿ, ಮುಂದೆ ನೀವೇ ಇಂತಹ ಸೂಕ್ತ ನಾಯಕನ ಆಯ್ಕೆಗೆ ಆದ್ಯತೆ ನೀಡುತ್ತೀರಾ ಎಂದು ಬಿಜೆಪಿಯ ಕೇಂದ್ರೀಯ ಮುಖಂಡರುಗಳಾದ ಜೀತು ಬಾಯಿ ವಾಗ್ಮೀ ಮತ್ತು ಕಾಟೀ ಬಾಯ್ ಅಮೃತ್ಯ್ ಮತದಾರರಿಗೆ ತಿಳಿಸಿದರು.

**ಸ್ಥಳೀಯ ಮುಖಂಡರ ಬಿರುಸಿನ ಪ್ರಚಾರ :** 15 ಮತ್ತು 16 ನೇ ವಾರ್ಡ್‌ಗಳ ಮತ ಪ್ರಚಾರದಲ್ಲಿ ನಾಗರಾಜ್ ಲೋಕಿಕೆರೆ ಪರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ನಗರ ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಮತ ಯಾಚಿಸಿದರು.

# 24ಕ್ಕೆ ನಗರದಲ್ಲಿ ಉಪನಯನ

ದಾವಣಗೆರೆ, ಮೇ 5 - ಶ್ರೀ ಶಂಕರ ಸೇವಾ ಸಂಘದಿಂದ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಇದೇ ದಿನಾಂಕ 24 ರಂದು ಧರ್ಮೋಪನಯನವನ್ನು ನಗರ ದ ನಿಜಲಿಂಗಪ್ಪ ಬಡಾವಣೆ ಶ್ರೀ ಶಂಕರ ಸಮುದಾಯ ಭವನ ದಲ್ಲಿ ಏರ್ಪಡಿಸಲಾಗಿದೆ.ಆಸಕ್ತಿಯುಳ್ಳ ವಿಪ್ರ ಪೋಷಕರು ಮೇ 15 ರೊಳಗೆ ಮೊ: 82964 08068 । 94807 10858 ಗೆ ಕರೆ ಮಾಡಿ ತಮ್ಮ ಹೆಸರನ್ನು ದೇವಸ್ಥಾನದ ವ್ಯವಸ್ಥಾಪಕ ರಲ್ಲಿ ನೋಂದಾಯಿಸುವಂತೆ ಸಂಘದ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಶಿ ತಿಳಿಸಿದ್ದಾರೆ.

# 8ರಂದು ಪಶುಸಂಗೋಪನಾ ತರಬೇತಿ

ದಾವಣಗೆರೆ, ಮೇ 5 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಇದೇ ದಿನಾಂಕ 8 ಮತ್ತು 9 ರಂದು ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.


**ಕರ್ನಾಟಕ ವಿಧಾನಸಭಾ ಚುನಾವಣೆ - 2023**
**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ - 107,**
**ಪಕ್ಷೇತರ ಅಭ್ಯರ್ಥಿ**

ಆತ್ಮೀಯ ಬಂಧುಗಳೇ, ದಿನಾಂಕ 10.5.2023ನೇ ಬುಧವಾರದಂದು ನಡೆಯಲಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿರುತ್ತೇನೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲು ಕಂಕಣ ಬದ್ಧನಾಗಿರುತ್ತೇನೆ. ನನ್ನ ಗುರುತಾದ ಇಟ್ಟಿಗೆ ಗುರುತಿಗೆ ತಮ್ಮ ಅಮೂಲ್ಯವಾದ ನೀಡುವುದರ ಮೂಲಕ ನನ್ನನ್ನು ಪ್ರಚಂಡ ಬಹುಮತದಿಂದ ಜಯಶೀಲನನ್ನಾಗಿಸಿ ಕ್ಷೇತ್ರದ ಅಭಿವೃದ್ಧಿಗಾಗಿ ಅವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.



| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಮತದಾನ |
|---|---|---|---|
| 11 | ಈರಣ್ಣ | | |

ದಿನಾಂಕ : 10.5.2023ನೇ ಬುಧವಾರ
ಸಮಯ : ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ
ತಮ್ಮ ಸೇವಾಂಕ್ಷಿ : ಈರಣ್ಣ S/o ಮಲ್ಲೇಶಪ್ಪ

ಇಟ್ಟಿಗೆ' ಗುರುತಿಗೆ ನಿಮ್ಮ ಮತ - ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಹಿತ

# ವ್ಯಕ್ತಿತ್ವ ವಿಕಸನಕ್ಕೆ ಬೇಸಿಗೆ ಶಿಬಿರ ಅಗತ್ಯ



**ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸತ್ಯನಾರಾಯಣ**

ದಾವಣಗೆರೆ, ಮೇ 5- ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಹಾಗೂ ಪಠ್ಯಕ್ರಮ ಹೊರತುಪಡಿಸಿ ವಿಶೇಷ ಚಟುವಟಿಕೆಗಳಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು ಬೇಸಿಗೆ ಶಿಬಿರಗಳು ಅಗತ್ಯವಾಗಿವೆ ಎಂದು ಶಿಕ್ಷಣ ಇಲಾಖೆಯ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸತ್ಯನಾರಾಯಣ್ ಅಭಿಪ್ರಾಯಪಟ್ಟರು.

ಭಾರತ ಸೇವಾದಳ, ಜೈ ಭಾರತ್ ಟ್ರಸ್ಟ್, ಫ್ಲೈಯಿಂಗ್ ಬರ್ಡ್ ಡ್ಯಾನ್ಸ್ ಇನ್‌ಸ್ಟಿಟ್ಯೂಟ್, ಎಕೆ ಫೌಂಡೇಶನ್ ರವರ ಸಹಯೋಗದಲ್ಲಿ ಮಕ್ಕಳಿಗೆ ಹಮ್ಮಿಕೊಂಡಿದ್ದ ಒಂದು ತಿಂಗಳ ಮಕ್ಕಳ ಬೇಸಿಗೆ ಶಿಬಿರವನ್ನು ಡಾ. ಬಿ. ಆರ್. ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸದೇ ಮೊಬೈಲ್ ಬಳಕೆ ಮಾಡಿಕೊಂಡು ದೈಹಿಕವಾಗಿ ಮತ್ತು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಪ್ರತಿ ವರ್ಷ ಭಾರತ ಸೇವಾದಳ ಮತ್ತು ಫ್ಲೈಯಿಂಗ್ ಬರ್ಡ್ಸ್ ನೃತ್ಯ ಶಾಲೆ ಮಕ್ಕಳಿಗೆ ಬೇಸಿಗೆ ಶಿಬಿರ ಆಯೋಜನೆ ಮಾಡಿ ಈಜು, ನೃತ್ಯ, ಕರಾಟೆ, ಯೋಗ, ಧ್ಯಾನ, ಪ್ರಾಣಾಯಾಮ, ನೈತಿಕ ಶಿಕ್ಷಣ, ಚಿತ್ರಕಲೆ, ನಾಯಕತ್ವ ಗುಣ, ದೇಶಾಭಿಮಾನ, ಭಾವೈಕ್ಯತೆ, ಸೇವಾ ಮನೋಭಾವನೆ ಮೂಡಿಸುವ ಶಿಕ್ಷಣವನ್ನು ಶಿಬಿರದಲ್ಲಿ ನೀಡುತ್ತದೆ ಎಂದು ತಿಳಿಸಿದರು.

ಭಾರತ ಸೇವಾದಳ ಕೇಂದ್ರ ಸಮಿತಿ ಸದಸ್ಯ ಟಿ. ನಾಗರಾಜ್, ಶಿಬಿರದ ಮಕ್ಕಳಿಗೆ ಶಾರೀರಿಕ ಯೋಗ, ನೈತಿಕ ಶಿಕ್ಷಣ ಪುಸ್ತಕ ಮತ್ತು ಗೀತೆಗಳ ಪುಸ್ತಕ, ಬ್ಯಾಡ್ಜ್ ಮಾಸ್ಕ್ ವಿತರಿಸಿದರು.

ಉದ್ಯಮಿ ಎಸ್.ಜಿ. ಉಳುವಯ್ಯ, ಸಂಪನ್ಮೂಲ ಶಿಕ್ಷಕಿ ನಾಗವೇಣಿ ಅವರುಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೇವಾದಳ ಜಿಲ್ಲಾ ಅಧ್ಯಕ್ಷ ಪ್ರೊ. ಎಚ್. ಚನ್ನಪ್ಪ ಪಲ್ಲಾಗಟ್ಟೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಸೇವಾದಳ ಅಧ್ಯಕ್ಷ ಹಾಸಬಾವಿ ಕರಿಬಸಪ್ಪ, ಜಿಲ್ಲಾ ಸಮಿತಿ ಸದಸ್ಯರಾದ ರಮಣ ಲಾಲ್ ಸಂಘವಿ, ಕೆ.ಬಿ. ಪರಮೇಶ್ವರಪ್ಪ, ಜೈ ಭಾರತ್ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಶೈಲಜಾ ಪರಶುರಾಮ್ ಖಟಾವ್‌ಕರ್ ಉಪಸ್ಥಿತರಿದ್ದರು.

ಪರಶುರಾಮ್ ಖಟಾವ್‌ಕರ್ ಸ್ವಾಗತಿಸಿದರು. ವಲಯ ಸಂಘಟಕ ಅಣ್ಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು, ಕೆ.ಟಿ.ಜಯಪ್ಪ ನಿರೂಪಿಸಿದರು. ಕೆ.ಪಿ. ಶ್ರೀಕಾಂತ್ ವಂದಿಸಿದರು.

# ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳ ದಾಳಿ ಸಲ್ಲದು



**ಹರಪನಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಿ.ರಾಮನಮಲಿ**

ಹರಪನಹಳ್ಳಿ, ಮೇ 5- ಕನ್ನಡ ಭಾಷೆಯ ಮೇಲೆ ಅನ್ಯ ಭಾಷೆಗಳು ದಾಳಿ ಮಾಡುತ್ತಿರುವುದು ಸರಿಯಲ್ಲ ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಿ.ರಾಮನಮಲಿ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಸಭಾ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕದಿಂದ ಏರ್ಪಡಿಸಿದ್ದ 109ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಪರಿಷತ್ತು ಸಾಹಿತಿಗಳಿಗೆ. ಕವಿಗಳಿಗೆ, ಕನ್ನಡದ ಜನತೆಗೆ ಹಬ್ಬದ ವಾತಾವರಣ ನಿರ್ಮಿಸಿ ಜ್ಞಾನಾರ್ಜನೆಯನ್ನು ನೀಡುತ್ತಾ ಬಂದಿದೆ. ರಾಜ, ಮಹಾರಾಜರುಗಳು, ವಿಶೇಶ್ವರಯ್ಯನಂತಹವರಿಂದ ಇಲ್ಲಿಯವರೆಗೆ ಅನೇಕ ಸಾಹಿತಿಗಳು, ಬರಹಗಾರರು, ಕವಿಗಳು, ಕನ್ನಡ ಅಭಿವೃದ್ಧಿಗಾಗಿ ತಮ್ಮದೇ ಆದ ಕೊಡುಗೆ ನೀಡಿ, ಕನ್ನಡ ಬದಲಾವಣೆಗಾಗಿ ನಿರಂತರವಾಗಿ ದುಡಿದಿದ್ದಾರೆ. ಕನ್ನಡ ನೆಲ, ಜಲ ಸಂರಕ್ಷಣೆ ಮಾಡುವ ಧ್ಯೇಯವನ್ನು ಕಸಾಪ ಹೊಂದಿದ್ದು, ಇಲ್ಲಿಯವರೆಗೂ ಕಸಾಪದಲ್ಲಿ ಸಾಕಷ್ಟು ಬದಲಾವಣೆ ಆಗಿದ್ದು, ಇತ್ತೀಚಿನ ದಿನಗಳಲ್ಲಿ ಕಸಾಪ ಹಿತರಕ್ಷಣೆ ಕಾಯುತ್ತಾ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ ಎಂದ ಅವರು, ಅನೇಕ ರಾಜ್ಯಾಧ್ಯಕ್ಷರು ಉತ್ತಮವಾದ ಕೆಲಸಗಳನ್ನು ಕಸಾಪದಲ್ಲಿ ಮಾಡಿದ್ದಾರೆ, ಮುಂದಿನ ಪೀಳಿಗೆಗಾಗಿ ಕನ್ನಡ ಉಳಿಸುವ ಕೆಲಸ ನಮ್ಮೆಲ್ಲರಿಂದ ಆಗಲಿ ಎಂದು ಹೇಳಿದರು.

ಸಾಹಿತಿ ಇಸ್ಮಾಯಿಲ್ ಎಲಿಗಾರ ಮಾತನಾಡಿ, ಕನ್ನಡ ಭಾಷೆ ತಾಯಿ ಭಾಷೆಯಾಗಬೇಕು. ನಿರಂತರ ಸಂಪರ್ಕ ಸಾಧನ, ಬದುಕಿನ ದ್ರವ್ಯವಾಗಬೇಕಿದೆ. ಮಾತೃಭಾಷೆ ಬದುಕಿನ ಭಾಗವಾಗಬೇಕು. ರಾಜ್ಯದಲ್ಲಿ ಪಂಪನಿಂದ ಇಲ್ಲಿಯವರೆಗೂ ಕನ್ನಡ ಭಾಷೆಯು ಕಥೆ, ನಾಟಕ, ಕವನ, ಸಾಹಿತ್ಯದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದು, ಅದರಲ್ಲೂ 12ನೇ ಶತಮಾನದ ಶರಣರು ಜನಸಾಮಾನ್ಯರ ಭಾಷೆಯಾಗಿ ಮೂಢನಂಬಿಕೆ, ಕಂದಾಚಾರಗಳನ್ನು ಹೊಗಲಾಡಿಸಲು ವಚನಗಳ ಮೂಲಕ ಭಾಷೆಯ ಅಭಿವೃದ್ಧಿಗೆ ಶ್ರಮಿಸಿದರು ಎಂದರು.

ಹರಪನಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಉಚ್ಚಂಗೆಪ್ಪ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಭವ್ಯವಾದ ಇತಿಹಾಸವಿದ್ದು, ಕನ್ನಡವು ನಮ್ಮ ಬದುಕಿನ ಭಾಗ, ನಮ್ಮ ಆಲೋಚನೆ, ಸಂಸ್ಕಾರ, ಸಂಸ್ಕೃತಿ, ಜೀವನ ಶೈಲಿ, ಬದುಕು, ಬರಹ, ಎಲ್ಲೆಡೆಯೂ ಕನ್ನಡವಿದೆ. ಕನ್ನಡ ನಮ್ಮನಮ್ಮ ಅಸ್ಮಿತೆ, ಕನ್ನಡ ಸಾಹಿತ್ಯ ಪರಿಷತ್ ನಾಲ್ಕು ಸದಸ್ಯತ್ವದಿಂದ ಆರಂಭವಾಗಿ ಇಂದು 2.5 ಲಕ್ಷಕ್ಕೂ ಅಧಿಕ ಸದಸ್ಯತ್ವ ಹೊಂದಿ ಹೆಮ್ಮರವಾಗಿದ್ದು, ದೇಶ, ಹೊರದೇಶಗಳಲ್ಲಿ ಕನ್ನಡದ ಕಂಪು ಪಸರಿಸುವ ಕೆಲಸ ಮಾಡುತ್ತಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಬಿ. ರಾಮಪ್ರಸಾದ ಗಾಂಧಿ, ಗೌರವ ಕಾರ್ಯದರ್ಶಿಗಳಾದ ಆರ್. ಪದ್ಮರಾಜ ಜೈನ್, ಜಿ.ಮಹಾದೇವಪ್ಪ, ತೆಲಿಗಿ ಹೋಬಳಿ ಘಟಕದ ಅಧ್ಯಕ್ಷ ವೀರಭದ್ರಪ್ಪ, ಸದಸ್ಯರಾದ ಪಿ.ಕರಿಬಸಪ್ಪ, ಹೆಚ್. ದೇವರಾಜ, ಶಿಕ್ಷಕರಾದ ರಮೇಶ ಹಾಗೂ ಇತರರು ಇದ್ದರು.

# ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಬೇಸಿಗೆಯ ಹಿನ್ನೆಲೆಯಲ್ಲಿ ಸಾಮಾಜಿಕ ಸೇವಾ ಸಂಸ್ಥೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ದಾನಿಗಳ ನೆರವಿನೊಂದಿಗೆ 1 ತಿಂಗಳ ಪರ್ಯಂತ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಿಸುವ ಕಾರ್ಯಕ್ರಮವನ್ನು ಶ್ರೀ ಜಯದೇವ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ. ಸುಹಾಸ್ ಮತ್ತು ಕುಟುಂಬದವರು ದಾವಣಗೆರೆ, ಶ್ರೀಮತಿ ಗಿರಿಜಾ ನಿಂಗಯ್ಯ ಕಾಡಯ್ಯನಮಠ್ ದಾವಣಗೆರೆ, ದಿ. ಎನ್.ಪಿ. ಚಂದ್ರಶೇಖರ್ ಸ್ಮರಣಾರ್ಥ ದಾವಣಗೆರೆ, ಸೌಂಡ್ ಹೆಲ್ತ್ ಸ್ಕ್ಯಾನಿಂಗ್ ಸೆಂಟರ್ ದಾವಣಗೆರೆ. ಇವರುಗಳು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ.

# ಕಡಿಮೆ ಬೆಲೆಗೆ ಚಪ್ಪಲಿ ಕೊಡಿಸುವ ನೆಪ ದರೋಡೆ ಮಾಡಿದ್ದ ತಂಡದ ಬಂಧನ



**ಕಾರ್ಯಾಚರಣೆ ನಡೆಸಿದ ಪೊಲೀಸ್ ತಂಡಕ್ಕೆ 10 ಸಾವಿರ ರೂ. ನಗದು ಬಹುಮಾನ ಘೋಷಣೆ**

ದಾವಣಗೆರೆ, ಮೇ 5- ಕಡಿಮೆ ಬೆಲೆಗೆ ಚಪ್ಪಲಿ ಕೊಡಿಸುವುದಾಗಿ ಹೇಳಿ ದರೋಡೆ ಮಾಡಿದ್ದ ಐವರ ತಂಡವನ್ನು ಬಂಧಿಸಿರುವ ಪೊಲೀಸರು, ಅವರಿಂದ 10 ಲಕ್ಷ ರೂ. ಮೌಲ್ಯದ ಮಾಲು ವಶಪಡಿಸಿಕೊಂಡಿದ್ದಾರೆ.

ಕೇರಳದ ವೈನಾಡ್ ಜಿಲ್ಲೆಯ ರಾಶಿಕ್ ಹಾಗೂ ಆತನ ಸ್ನೇಹಿತ ಅಭಿನೋಶನ್, ನಿಜಾಮುದ್ದೀನ್ ಅವರಿಗೆ ರಫೀಕ್ ಎಂಬ ವ್ಯಕ್ತಿ ಕಡಿಮೆ ದರದಲ್ಲಿ ಕಂಪನಿಯಿಂದ ನೇರವಾಗಿ ಚಪ್ಪಲಿ ಕೊಡಿಸುವುದಾಗಿ ನಂಬಿಸಿದ್ದ.

ದಾವಣಗೆರೆಯ ಬಾಡಾ ಕ್ರಾಸ್ ಬಳಿ ಆತನನ್ನು ಕರೆಯಿಸಿಕೊಂಡು ರಫೀಕ್ ಹಾಗೂ ಆತನ ಐವರು ಸಹಚರರು ಹಲ್ಲೆ ಮಾಡಿ ಅವರ ಬಳಿಯಿದ್ದ 57 ಸಾವಿರ ರೂ. ನಗದು, 3 ಮೊಬೈಲ್, ಪರ್ಸ್, ದಾಖಲಾತಿ ಇದ್ದ ಬ್ಯಾಗ್ ಕಿತ್ತುಕೊಂಡು ಹೋಗಿದ್ದಾಗಿ ಅವರು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಆರೋಪಿತರನ್ನು ಪತ್ತೆ ಹಚ್ಚಿರುವ ಪೊಲೀಸರು, ಹರಪನಹಳ್ಳಿ ಯಲ್ಲಾಪುರದ ಪ್ರವೀಣ್ (23), ದೇವಣ್ಣ (39), ಸುಭಾಷ್ (24), ವೀರೇಶ್ (23) ಹಾಗೂ ದಾವಣಗೆರೆ ಕೆಟಿಜೆ ನಗರದ ಎಲ್. ಸಂಜಯ್ (23) ಇವರುಗಳನ್ನು ಬಂಧಿಸಿದ್ದು, ದರೋಡೆ ಮಾಡಿದ್ದ 10 ಸಾವಿರ ರೂ. ನಗದು, 40 ಸಾವಿರ ರೂ. ಬೆಲೆ ಬಾಳುವ 2 ಮೊಬೈಲ್, ಪರ್ಸ್, ಬ್ಯಾಗ್ ಹಾಗೂ 8 ಲಕ್ಷ ರೂ. ಬೆಲೆಯ ಒಂದು ಕಾರು, 1.50 ಲಕ್ಷ ರೂ. ಬೆಲೆಯ ಒಂದು ಬುಲ್ಲೆಟ್ ಬೈಕ್ ವಶಪಡಿಸಿಕೊಂಡಿದ್ದಾರೆ.

ಆರೋಪಿಗಳ ಪತ್ತೆ ಕಾರ್ಯವನ್ನು ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಮಾರ್ಗದರ್ಶನದಲ್ಲಿ ತನಿಖಾಧಿಕಾರಿ ವಿದ್ಯಾನಗರ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಭಾವತಿ ಸಿ.ಶೇತಸನದಿ, ಆರ್.ಪಿ. ಅನಿಲ್, ಪಿಎಸ್ಐ ಎಂ.ಎಸ್. ದೊಡ್ಡಮನಿ, ಸಿಬ್ಬಂದಿಗಳಾದ ಆನಂದ ಮುಂದಲಮನಿ, ಗೋಪಿನಾಥ್ ಬಿ.ನಾಯ್ಕ, ಭೋಜಪ್ಪ ಕಿಚಡಿ, ಯೋಗೀಶ್ ನಾಯ್ಕ, ಮಂಜುನಾಥ ಬಿ.ವಿ., ರುದ್ರೇಶ್, ಲಕ್ಷ್ಮಣ, ರಾಮಚಂದ್ರಪ್ಪ, ರಾಘವೇಂದ್ರ, ಶಾಂತರಾಜ್, ಸೋಮಪ್ಪ, ಮಾರುತಿ, ದೇವರಾಜ್, ಗುರುಸಿದ್ದನಗೌಡ ಅವರುಗಳಿಗೆ ಎಸ್ಪಿ ಡಾ.ಅರುಣ್ ಕೆ ಹಾಗೂ ಹೆಚ್ಚುವರಿ ಎಸ್ಪಿ ಆರ್.ಬಿ. ಬಸರಗಿ ಶ್ಲಾಘಿಸಿದ್ದಾರೆ.

# ರಾಣೇಬೆನ್ನೂರು ನಿರುದ್ಯೋಗ ಮುಕ್ತ ತಾಲ್ಲೂಕು; ಪ್ರಕಾಶ ಸೇವೆಯ ಹೆಗ್ಗುರುತು



ರಾಣೇಬೆನ್ನೂರು, ಮೇ 5- ಪ್ರಕಾಶ ಕೋಳಿವಾಡ ಅವರಿಗೆ ರಾಣೇಬೆನ್ನೂರು ಮತದಾರ ಬಾಂಧವರು ಮತ ನೀಡಿದರೆ ನನಗೆ ಮತ ನೀಡಿದಂತಾಗುತ್ತದೆ. ಅವರ ಗೆಲುವು ನನಗೆ ಬಲವಾದ ಶಕ್ತಿ ತುಂಬುತ್ತದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಗೂಗಲ್ ಮೀಟ್ ನಲ್ಲಿ ತಿಳಿಸಿದರು.

ಕೆಲವೆಡೆ ಚುನಾವಣಾ ಪ್ರಚಾರ ನಡೆಸಿದ್ದು ತಮ್ಮ ಸ್ವಕ್ಷೇತ್ರದಲ್ಲಿ ಇರುವುದು ಅವಶ್ಯವಿರುವುದರಿಂದ ರಾಣೇಬೆನ್ನೂರು ಕ್ಷೇತ್ರಕ್ಕೆ ಬರಲು ಸಾಧ್ಯವಾಗಿಲ್ಲ, ಕಾರಣ ಅಲ್ಲಿನ ಮತದಾರ ಬಾಂಧವರು ಅನ್ಯತಾ ಭಾವಿಸದೇ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಪ್ರಕಾಶ್ ಅವರಿಗೆ ಮತ ನೀಡುವಂತೆ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಬಿಜೆಪಿ ಸರ್ಕಾರದ ಭ್ರಷ್ಟ ಆಡಳಿತದಿಂದ ಬೇಸತ್ತಿರುವ ರಾಜ್ಯದ ಜನರ ಒಲವು ಕಾಂಗ್ರೆಸ್‌ನತ್ತ ಇದೆ. ಕಾಂಗ್ರೆಸ್ ಸರ್ಕಾರ ರಚಿಸುವುದು ನೂರಕ್ಕೆ ನೂರರಷ್ಟು ಸತ್ಯವಾಗಿದ್ದು, ನಿರುದ್ಯೋಗ ಮುಕ್ತ ತಾಲ್ಲೂಕು, ಬರಗಾಲ ಮುಕ್ತ ಜಿಲ್ಲೆ ಎನ್ನುವ 2 ಗ್ಯಾರಂಟಿಗಳನ್ನು ಪಕ್ಷದ ಗ್ಯಾರಂಟಿಗಳ ಜೊತೆಗೆ ಸೇರಿಸಿರುವುದು ಪ್ರಕಾಶ ಸೇವೆಗೆ ಕಳಸವಿಟ್ಟಂತಾಗಿದ್ದು, ಮತ ನೀಡಿ ಪ್ರಕಾಶ ಕೋಳಿವಾಡ ಅವರನ್ನು ವಿಧಾನಸೌಧಕ್ಕೆ ಕಳಿಸಿರಿ ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

# ಮನೆಕಳ್ಳತನ ಆರೋಪಿಗಳ ಬಂಧನ



**39.62 ಲಕ್ಷದ ಚಿನ್ನಾಭರಣ ವಶ**

ದಾವಣಗೆರೆ, ಮೇ 5- ಜಿಲ್ಲಾ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಂತರಾಜ್ಯ ಮನೆಕಳ್ಳತನ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಿದ್ದು, 39.62 ಲಕ್ಷ ರೂ. ಮೌಲ್ಯದ 762 ಗ್ರಾಂ. ಚಿನ್ನಾಭರಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮನೆಗೆ ನುಗ್ಗಿ ಬೀರುವಿನಲ್ಲಿದ್ದ 285 ಗ್ರಾಂ. ಬಂಗಾರದ ಆಭರಣಗಳು ಮತ್ತು 1.5 ಲಕ್ಷ ರೂ. ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿರುವದನ್ನು ಪತ್ತೆ ಮಾಡಿ ಕೊಡಿ ಎಂದು ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಸರಗಿ ನಿರ್ದೇಶನದಲ್ಲಿ ನಗರ ಉಪ ವಿಭಾಗದ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ ಹಾಗೂ ಎ.ಕೆ. ರುದ್ರೇಶ್ ಮಾರ್ಗದರ್ಶನದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆ ಸಿಪಿಐ ಯು.ಜೆ. ಶಶಿಧರ್ ನೇತೃತ್ವದ ತಂಡ ಆರೋಪಿತರಾದ ರಾಜು ಯಾನೆ ಪೋತರಾಜ್, ಸದ್ದಾಂ, ಆಟೋ ಚಾಲಕ ಕೂಡ್ಲಿಗಿ ತಾಲ್ಲೂಕು, ಮನು ಯಾನೆ ಮನ್ಸೂರ ಗಾರೆ ಕೆಲಸ ಕೊರಚರಹಟ್ಟಿ ನಿಟುವಳ್ಳಿ ದಾವಣಗೆರೆ, ಜಗದೀಶ, ಹೆಚ್. ಗಿರೀಶ್ ಗಾರೆ ಕೆಲಸ ಗಡಬನಹಳ್ಳಿ ಚಿಕ್ಕಮಗಳೂರು ಎಂಬುವವರನ್ನು ಬಂಧಿಸಲಾಗಿದೆ.

ಬಂಧಿತರಿಂದ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ 1 ಪ್ರಕರಣ, ಚಿಕ್ಕಮಗಳೂರು ಠಾಣೆಯಲ್ಲಿ 2 ಪ್ರಕರಣ, ಹಾಸನದಲ್ಲಿ 1 ಪ್ರಕರಣ, ಆಂಧ್ರಪ್ರದೇಶದ ಚಿತ್ತೂರು 2 ಹಾಗೂ ಟೌನ್ ಠಾಣೆಯಲ್ಲಿ ಒಂದು ಪ್ರಕರಣವನ್ನು ಪತ್ತೆ ಮಾಡಿ ಕಳ್ಳತನವಾದ 850 ಗ್ರಾಂ. ಬಂಗಾರದ ಆಭರಣಗಳನ್ನು ವಶಪಡಿಸಿಕೊಳ್ಳಲು ಬಾಕಿಯಿದ್ದು, ತನಿಖೆ ಮುಂದುವರೆದಿರುತ್ತದೆ.

# ಮೌಲಾನಾ ಆಜಾದ್ ಮಾದರಿ ವಸತಿ ಶಾಲೆ 6 ನೇ ತರಗತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 5- ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ 6 ನೇ ತರಗತಿ ವ್ಯಾಸಂಗ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಈ ಶಾಲೆಗಳಲ್ಲಿ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75 ರಷ್ಟು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇ. 25 ರಷ್ಟು ಪ್ರವೇಶ ನೀಡಲಾಗುತ್ತದೆ.

ಅರ್ಜಿಗಳನ್ನು ಆಯಾ ವಸತಿ ಶಾಲೆಗಳಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಮೇ 10 ರೊಳಗಾಗಿ ವಸತಿ ಶಾಲೆಗಳಿಗೆ ಸಲ್ಲಿಸಲು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ಓದುಗರ ಪತ್ರ

### ಆಹ್ವಾನ ಪತ್ರಿಕೆಗಳಿಗೆ ಅಷ್ಟೊಂದು ಇನ್ವೆಸ್ಟ್ ಮಾಡುವ ಅಗತ್ಯ ಇದೆಯಾ?

**ಮಾನ್ಯರೇ,**

ಎಲ್ಲರೂ ಗಮನಿಸಿರುವ ಹಾಗೆ ಕೆಲವರು ಆಹ್ವಾನ ಪತ್ರಿಕೆಗಳನ್ನು ತುಂಬಾ ವೈಭವಯುತವಾಗಿ ಮಾಡಿಸಿರುತ್ತಾರೆ. ಈ ರೀತಿ ತಮ್ಮ ಸಂಪತ್ತಿನ ಪ್ರದರ್ಶನ ಮಾಡುವ ಅವಶ್ಯಕತೆ ಇದೆಯೇ? ಎಂದು ನಾವೆಲ್ಲರೂ ಚಿಂತನೆ ಮಾಡಬೇಕಿದೆ. ಅವರ ದೊಡ್ಡಸ್ತಿಕೆಗೆ ಪರಿಸರ ಹಾಳು ಮಾಡುವುದು ಎಷ್ಟು ಸರಿ? ಈ ಕಾಗದದ ತಯಾರಿಕೆಗೆ ಮರಗಳನ್ನು ಕಡಿಯುವುದರಿಂದ ಪ್ರಕೃತಿಯನ್ನು ನಾವಾಗೇ ಹಾಳುಮಾಡಿದ ಹಾಗೆ ಆಗುವುದಿಲ್ಲವೇ? ಹೋಗಲಿ ಒಂದು ಮದುವೆ, ಕಾರ್ಯಕ್ರಮ ಆದಾಗ ನೆನಪಿಗೆ ಒಂದು ಸಸಿಯನ್ನಾದರೂ ನೆಡುವ ಪರಿಪಾಠ ಬೆಳೆಸಿಕೊಳ್ಳುತ್ತಾರೆಯೋ? ಅದೂ ಇಲ್ಲ.

ಹೀಗಿದ್ದಾಗ ನಮಗೆ ಪರಿಸರವನ್ನು ಹಾಳು ಮಾಡುವ ಯಾವ ಅಧಿಕಾರವೂ ಇರುವುದಿಲ್ಲ. ನಾವು ಓದುತ್ತಿರುವಾಗ ಆಹ್ವಾನ ಪತ್ರಿಕೆಯ ಖಾಲಿ ಜಾಗದಲ್ಲಿ ಮಗ್ಗಿ, ಭೂಪಟ, ಪದ್ಯಗಳನ್ನು ಬರೆದು ಅಭ್ಯಾಸ ಮಾಡುತ್ತಿದ್ದೆವು. ಹಾಗಾಗಿ ಸ್ವಲ್ಪವಾದರೂ ಮರುಬಳಕೆಯಾಗಿ ಕಾಗದದ ಉಳಿತಾಯವಾಗುತ್ತಿತ್ತು. ಈಗಂತೂ ಯಾರೂ ಹೀಗೆ ಮಾಡುವುದಿಲ್ಲ. ಈ ರೀತಿ ಮರುಬಳಕೆ ಮಾಡುವುದನ್ನು ಕೀಳಾಗಿ ನೋಡುತ್ತಾರೆ. ಸುಮ್ಮನೆ ಕಸಕ್ಕೆ ಎಸೆದು ಬಿಡುತ್ತಾರೆ. ದಿನಾಂಕ ಮುಗಿದ ತಕ್ಷಣ ಬಿಸಾಕುವ ಆಹ್ವಾನ ಪತ್ರಿಕೆಗಳಿಗೆ ಅಷ್ಟೊಂದು ಇನ್ವೆಸ್ಟ್ ಮಾಡುವ ಅವಶ್ಯಕತೆ ಇದೆಯಾ?

ಹಾಗೂ ಮೊದಲು ಬೇರೆ ಊರುಗಳಿಗೆ ಪೋಸ್ಟ್ ಮಾಡುತ್ತಿದ್ದುದರಿಂದ ಪತ್ರಿಕೆ ಮೇಲೆ ಇನ್ನೊಂದು ಕವರ್ ಇರಬೇಕಾಗಿತ್ತು. ಈಗ ಪೋಸ್ಟ್ ಮಾಡುವುದು ಕಡಿಮೆ. ಎಲ್ಲಾ ವಾಟ್ಸಾಪ್ ಮೂಲಕ ಕಳಿಸುತ್ತಾರೆ. ಆದ್ದರಿಂದ ಕೈಯಲ್ಲಿ ಕೊಡುವ ಪತ್ರಿಕೆಗಳಿಗೆ ಕವರ್ ಬೇಕಾಗುವುದಿಲ್ಲ. ಅವಷ್ಟನ್ನಾದರೂ ಉಳಿಸಬಹುದು.

ಅಲ್ಲದೆ ಒಳಗಿನ ಪುಟಗಳು ನಾಲ್ಕು ಇರುತ್ತವೆ. ಮೇಲಿನ ಪುಟದಲ್ಲಿ ದೇವರ ಚಿತ್ರ ಮತ್ತೆ ಒಳಗೆ ಹಿಂದೆ ಖಾಲಿ ಇರುತ್ತದೆ. ಅದರ ಬದಲಿಗೆ ವಿಷಯ ಇರುವ ಪುಟದ ಹೊರಬದಿಯಲ್ಲಿ ದೇವರ ಚಿತ್ರ ಹಾಕಿದರೆ ಹೊರಗಿನ ಪುಟವನ್ನು ಸಹ ಉಳಿಸಬಹುದು. ಒಂದೊಂದು ಮದುವೆಯಿಂದ ಹೀಗೆ ಸಾವಿರಾರು ಪುಟಗಳನ್ನು, ಕವರ್ ಗಳನ್ನು ಉಳಿಸಿದರೆ ನಾವು ಎಷ್ಟೊಂದು ಗಿಡ ಮರಗಳನ್ನು ಉಳಿಸಿದ ಹಾಗೆ ಆಗುವುದಿಲ್ಲವೇ?

ಪರಿಸರ ಕಾಳಜಿಯಿಂದ ಆಹ್ವಾನ ಪತ್ರಿಕೆಗಳ ಬಗ್ಗೆ ಒಂದು ಬದಲಾವಣೆಯನ್ನು ಮಾಡಿದರೆ ನಾವು ಪ್ರಕೃತಿಗೆ ನಿಜವಾದ ಸೇವೆ ಸಲ್ಲಿಸಿದ ಹಾಗೆ ಆಗುತ್ತದೆ.

- **ಮಮತಾ ನಾಗರಾಜ್**, ದಾವಣಗೆರೆ. 9964829122

# ಎಸ್ಸೆಸ್ - ಎಸ್ಸೆಸ್ಸೆಂ ಗೆಲುವಿಗಾಗಿ ಪ್ರಾರ್ಥಿಸಿ, ಉರುಳು ಸೇವೆ





ದಾವಣಗೆರೆ, ಮೇ 5- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಗೆಲುವಿಗಾಗಿ ಪ್ರಾರ್ಥಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಉರುಳು ಸೇವೆ ನಡೆಸಿದರು.

ಹಗೇದಿಬ್ಬ ಸರ್ಕಲ್ ಬಳಿಯ ನಗರ ದೇವತೆ ಕರಗಲ್ಲಿಗೆ ಪೂಜೆ ಸಲ್ಲಿಸಿದ ಕಾರ್ಯಕರ್ತರು ನಗರ ದೇವತೆ ದೇವಸ್ಥಾನ ದವರೆಗೂ ಉರುಳು ಸೇವೆ ಸಲ್ಲಿಸಿ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರು ಗೆಲ್ಲುವಂತೆ ಪ್ರಾರ್ಥಿಸಿದರು.

ಕೆಪಿಸಿಸಿ ಓಬಿಸಿ ವಿಭಾಗದ ಪ್ರಧಾನ ಕಾರ್ಯದರ್ಶಿ ಜಮ್ನಳ್ಳಿ ನಾಗರಾಜ್ ಅವರ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಚಂದ್ರು ದೀಟೂರ್, ಓಬಿಸಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಧು ಮೈಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ರಾಜೇಶ್, ಕುಂಬಾರ್ ಸಮಾಜದ ಮುಖಂಡರಾದ ಕುಂಬಾರ ಅಜ್ಜಣ್ಣ, ಕುಮಾರ್, ಬಂಡಿ ಯಲ್ಲಪ್ಪ, ಹೊನ್ನಪ್ಪ ಉರುಳು ಸೇವೆ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಹೆಚ್.ಬಿ.ಗೋಣೆಪ್ಪ, ನಗರಸಭೆ ಮಾಜಿ ಅಧ್ಯಕ್ಷ ಎಂ.ಮಂಜುನಾಥ್, ಮಾಜಿ ಸದಸ್ಯ ಎಸ್. ಮಲ್ಲಿಕಾರ್ಜುನ್, ಇಂಟಕ್ ಅಧ್ಯಕ್ಷ ಕೆ.ಎಂ. ಮಂಜುನಾಥ್, 6ನೇ ವಾರ್ಡ್ ಅಧ್ಯಕ್ಷ ಸಾಲಮನಿ ಬಸವರಾಜ್, ಆನಂದ ಇಟ್ಟಿಗುಡಿ, ಬಂಡಿ ಚಂದ್ರು, ದುಗ್ಗೇಶ್, ಅನಿಲ್, ರಮೇಶ್, ಮೈಲಿ ಜಯಕುಮಾರ್, ಮಚ್ಚು ಚಂದ್ರು, ಕುಂಬಾರ್ ತಿಪ್ಪೇಶ್, ಡೆಂಟಲ್ ರಾಜು, ತೆಲಿಗಿ ರಾಮಣ್ಣ, ನಜೀರ್ ಸಾಬ್ ಇನ್ನಿತರರಿದ್ದರು.

# ನಗರದಲ್ಲಿ ಇಂದು ಹುಣ್ಣಿಮೆ ಕಾರ್ಯಕ್ರಮ

ಅಕ್ಕಮಹಾದೇವಿ ಮಹಿಳಾ ಸಮಾಜದ ವತಿಯಿಂದ ಹುಣ್ಣಿಮೆ ಕಾರ್ಯಕ್ರಮದಡಿಯಲ್ಲಿ ಚಿಂತನ - ಮಂಥನ ಕಾರ್ಯಕ್ರಮವು ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಅಕ್ಕಮಹಾದೇವಿ ಮಹಿಳಾ ಸಮಾಜ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಯಶವಂತಕುಮಾರ್ ಅವರು ಬುದ್ಧನ ಕುರಿತಂತೆ ಮಾತನಾಡುವರು. ಇದೇ ಕಾಲೇಜಿನ ಆಂಗ್ಲ ಭಾಷಾ ಉಪನ್ಯಾಸಕರಾದ ಡಿ.ಪಿ. ಗಂಗಾಧರ ಮೂರ್ತಿ ಅವರು ಜಗಜ್ಯೋತಿ ಬಸವಣ್ಣನವರ ಕುರಿತು ಮಾತನಾಡುವರು.

ಅಕ್ಕಮಹಾದೇವಿ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಕೆ.ಕೆ. ಸುಶೀಲಮ್ಮ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಕಾರ್ಯಕ್ರಮದಲ್ಲಿ ಶ್ರೀಮತಿ ಶಾಂತಾ ಯಾವಗಲ್ ವಚನ ಗಾಯನ ನಡೆಸಿಕೊಡುವರು. ಶ್ರೀಮತಿ ನೀಲಗುಂದ ಜಯಮ್ಮ ಚಿಂತನ - ಮಂಥನ ನಡೆಸುವರು.

# ತ್ಯಾವಣಗಿ ಸುತ್ತಮುತ್ತ ಇಂದು ಪುಷ್ಪ ವಾಗೀಶ್‌ಸ್ವಾಮಿ ಪ್ರಚಾರ



ಮಾಯಕೊಂಡ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಶ್ರೀಮತಿ ಪುಷ್ಪ ವಾಗೀಶ್‌ಸ್ವಾಮಿ ಅವರು ಇಂದು ಬೆಳಿಗ್ಗೆ 8 ಗಂಟೆಯಿಂದ ತ್ಯಾವಣಿಗಿ, ಬೆಳಲಗೆರೆ, ಚಿರಡೋಣಿ, ಸಾಗರಪೇಟೆ, ಬಸವಾಪಟ್ಟಣ ಮತ್ತು ದಾಗಿನಕಟ್ಟೆ ಗ್ರಾಮಗಳಲ್ಲಿ ಮತ ಯಾಚನೆ ಮಾಡಲಿದ್ದಾರೆ.

# ದಾವಣಗೆರೆ ನಗರಕ್ಕೆ ಅತ್ಯುತ್ತಮ ನಾಯಕರ ಅವಶ್ಯಕತೆ ಇದೆ : ಡಾ. ಪ್ರಭಾ



**ಮಹಿಳಾ ಕ್ರೆಡಿಟ್ ಕೋ-ಆಪ್. ಸೊಸೈಟಿಯಲ್ಲಿ ಸಂವಾದ ಕಾರ್ಯಕ್ರಮ**

ದಾವಣಗೆರೆ, ಮೇ 5- ನಗರದ ಶ್ರೀ ಸದ್ಯೋಜಾತ ಮಠದಲ್ಲಿ ದಾವಣಗೆರೆ ಮಹಿಳಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸೊಸೈಟಿ ಸದಸ್ಯರು ಮತ್ತು ಸ್ತ್ರೀ ಶಕ್ತಿ ಗುಂಪಿನ ಸದಸ್ಯರಿಗೆ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿ, ಮಹಿಳಾ ಸದಸ್ಯರೊಂದಿಗೆ ಸಂವಾದ ನಡೆಸಿದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಮಹಿಳೆಯರ ದಿನನಿತ್ಯದ ಕೌಟುಂಬಿಕ ನಿರ್ವಹಣೆ, ಉಳಿತಾಯ, ಮಕ್ಕಳ ಶಿಕ್ಷಣ, ಕೌಟುಂಬಿಕ ಆರೋಗ್ಯ ವಿಚಾರಗಳ ಕುರಿತಂತೆ ಸೂಕ್ಷ್ಮ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಹೇಗೆ ಜಯಶೀಲರಾಗ ಬಹುದು ಎಂಬುದನ್ನು ತಿಳಿಸಿದರು.

ದಾವಣಗೆರೆ ನಗರಕ್ಕೆ ಅತ್ಯುತ್ತಮ ನಾಯಕರ ಅವಶ್ಯಕತೆ ಇದೆ. ಹಾಗಾಗಿ ಸಮಗ್ರ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯಾಗಬೇಕು ಎಂದರೆ ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಬೇಕು ಎಂದು ಮನವಿ ಮಾಡಿದರು. ಅವರು ಚುನಾವಣೆಯಲ್ಲಿ ಗೆದ್ದು, ಶಾಸಕರಾಗಿ,ಮಂತ್ರಿಯಾಗಿ ಎಲ್ಲರ ಆಶಯಕ್ಕೆ ಒತ್ತು ಕೊಟ್ಟು ಕೆಲಸ ಮಾಡುತ್ತಾರೆ ಎಂಬ ಭರವಸೆಯನ್ನು ಮಹಿಳೆಯರ ಪ್ರಶ್ನೋತ್ತರಗಳಿಗೆ ಉತ್ತರವಾಗಿ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ಮಹಿಳಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷೆ ಶ್ರೀಮತಿ ನಿರ್ಮಲ ಸುಭಾಷ್ ಪ್ರಾಸ್ತಾವಿಕವಾಗಿ ಮಾತನಾಡಿ, ಹಿಂದಿಗಿಂತಲೂ ಇಂದು ಮಹಿಳೆಯರಲ್ಲಿ ಕಾರ್ಯವೈಖರಿ, ಸಾಮಾಜಿಕ ಅರಿವು ಮತ್ತು ಆರ್ಥಿಕ ನಿರ್ವಹಣೆ ಅತ್ಯುತ್ತಮ ರೀತಿಯಲ್ಲಿ ಬದಲಾವಣೆ ಕಾಣುತ್ತಿದೆ ಎಂದರು.

ಸೊಸೈಟಿಗಳಲ್ಲಿ ಪಡೆದ ಸಾಲವನ್ನು ಸಮಯಕ್ಕೆ ಸರಿಯಾಗಿ ಪ್ರಾಮಾಣಿಕವಾಗಿ ಪಾವತಿಸಿ, ಬೇರೆಯವರಿಗೆ ಮಾದರಿಯಾಗಿದ್ದಾರೆ. ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಸ್ವಾಭಿಮಾನಿಗಳಾಗಿ ಹೊರ ಹೊಮ್ಮಿದ್ದಾರೆ ಎಂದು ಅವರು ನುಡಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಜೆ.ಆರ್.ಷಣ್ಮುಖಪ್ಪ, ಆರ್.ಜಿ.ಶ್ರೀನಿವಾಸ ಮೂರ್ತಿ ಅವರುಗಳು ಮಾತನಾಡಿ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಅಭಿವೃದ್ಧಿ ಕಾರ್ಯಗಳನ್ನು ಶ್ಲಾಘಿಸಿದರು. ಸೊಸೈಟಿ ಉಪಾಧ್ಯಕ್ಷರಾದ ಪಲ್ಲವಿ ಪಾಟೀಲ್ ನಿರೂಪಿಸಿದರು. ಶ್ರೀಮತಿ ಲತಾ ಆರ್.ಜೆ., ಶ್ರೀಮತಿ ಸುನಿತಾ ಇಂದೂದರ್, ಶ್ರೀಮತಿ ಗೀತಾ ಪ್ರಶಾಂತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಹರಿಹರದಲ್ಲಿ ಜೆಡಿಎಸ್ ಅಭ್ಯರ್ಥಿ ಶಿವಶಂಕರ್‌ಗೆ ಕಮ್ಯುನಿಸ್ಟ್ ಪಕ್ಷ ಬೆಂಬಲ



ದಾವಣಗೆರೆ, ಮೇ 5- ಹರಿಹರದಲ್ಲಿ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಅವರನ್ನು ಸೋಲಿಸಲು ಜೆಡಿಎಸ್ ಅಭ್ಯರ್ಥಿ ಹೆಚ್. ಎಸ್. ಶಿವಶಂಕರ್ ಅವರಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೇಷರತ್ ಬೆಂಬಲ ನೀಡಲಿದೆ ಎಂದು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಹೆಚ್. ಆನಂದರಾಜ್ ತಿಳಿಸಿದ್ದಾರೆ.

ಜನರ ದಿಕ್ಕು ತಪ್ಪಿಸಿ ಚುನಾವಣೆಯಲ್ಲಿ ಸುಳ್ಳು ಭರವಸೆಗಳನ್ನು ಕೊಡುವ ಮೂಲಕ ಜನರಿಂದ ಮತ ಪಡೆಯಲು ವಿವಿಧ ದಾರಿಗಳಲ್ಲಿ ಪ್ರಯತ್ನ ಮಾಡುತ್ತಿರುವ ಬಿಜೆಪಿಯಿಂದ ದೇಶಕ್ಕೆ ಮತ್ತು ದೇಶದ ಜನರಿಗೆ ಅಪಾಯವಿರುವುದನ್ನು ಅರಿತು ಸಿಪಿಐ (ಎಂ) ಪಕ್ಷವು ಬಿಜೆಪಿಯನ್ನು ಸೋಲಿಸುವ ಉದ್ದೇಶ ಹೊಂದಿದೆ ಎಂದರು.

ಶಿವಶಂಕರ್ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಾಗಿದ್ದ ಸಂದರ್ಭದಲ್ಲಿ ಅನೇಕ ಜನಪರ ಕಾರ್ಯಗಳನ್ನು ಮಾಡಿರುವುದನ್ನು ಗಮನಿಸಿದ್ದು, ಮತದಾರರು ಶಿವಶಂಕರ್ ಅವರಿಗೆ ಮತ ನೀಡುವಂತೆ ಅವರು ಕೋರಿದ್ದಾರೆ.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರವು ದೇಶ ಭಕ್ತಿಯ ಹೆಸರಿನಲ್ಲಿ ದೇಶದ ಶಸ್ತ್ರಾಸ್ತ್ರ ತಯಾರಿಕಾ ಕಂಪನಿಗಳನ್ನು ಖಾಸಗಿಯವರಿಗೆ ಮಾರುವ ಮೂಲಕ ದೇಶದ ಭದ್ರತೆಗೆ ಕುತ್ತು ತಂದಿದ್ದು, ದಿನಬಳಕೆಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಿರುವ, ಬಡ ಜನರಿಗೆ ಇದ್ದ ಸಬ್ಸಿಡಿ ಸಿಲಿಂಡರ್ ಬೆಲೆಯನ್ನು 1150 ರೂ. ಗಳಿಗೆ ಹೆಚ್ಚಿಸಿ ಬಡವರನ್ನು ಸಂಕಷ್ಟಕ್ಕೆ ಸಿಲುಕಿಸಿರುವ, ದೇಶಕ್ಕೆ ಮಾರಕವಾಗಿರುವ ಶಿಕ್ಷಣ ನೀತಿಯನ್ನು ರೂಪಿಸಿರುವ ಬಿಜೆಪಿಯನ್ನು ದೂರ ಇಡಲು ಹರಿಹರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

## 25ನೇ ವಾರ್ಡ್‌ನಲ್ಲಿ ಇಂದು ಎಸ್ಸೆಸ್ ಪ್ರಚಾರ



ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರು ನಗರ ಪಾಲಿಕೆಯ 25ನೇ ವಾರ್ಡ್‌ನ ವಿವಿಧ ಕಡೆಗಳಲ್ಲಿ ಇಂದು ಮತ ಯಾಚನೆ ನಡೆಸುವರು.

ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಡಿಸಿಎಂ ಟೌನ್‌ಶಿಪ್, ನೀಲಮ್ಮನ ತೋಟ, ಗಣೇಶ ಲೇ-ಔಟ್, ಕಿರುವಾಡಿ ಲೇ-ಔಟ್, ಕೆ.ಬಿ.ಬಡಾವಣೆಯಲ್ಲಿ ಪ್ರಚಾರ ನಡೆಸುವರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ವಾರ್ಡ್ ಅಧ್ಯಕ್ಷ ರಾಕೇಶ್, ಮುಖಂಡರು, ಕಾರ್ಯಕರ್ತರು ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## 36,44ನೇ ವಾರ್ಡುಗಳಲ್ಲಿ ಇಂದು ನಾಗರಾಜ್ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಇಂದು ಬಿರುಸಿನ ಮತ ಪ್ರಚಾರ ನಡೆಸುವರು.

ಬೆಳಗ್ಗೆ 8 ರಿಂದ 11 ಗಂಟೆವರೆಗೆ ಹೊಸಕುಂದವಾಡ ವ್ಯಾಪ್ತಿಯಲ್ಲಿ ಮತ ಯಾಚಿಸುವರು. 11 ರಿಂದ ಮಧ್ಯಾಹ್ನ 2.30ರವರೆಗೆ 36ನೇ ವಾರ್ಡ್ ನಿಟ್ಟುವಳ್ಳಿ, ಲೆನಿನ್ ನಗರ ವ್ಯಾಪ್ತಿಯಲ್ಲಿ ಹಾಗೂ ಸಂಜೆ 4ರಿಂದ 6 ಗಂಟೆವರೆಗೆ ಹಳೇ ಕುಂದವಾಡ ಗ್ರಾಮ ವ್ಯಾಪ್ತಿಯಲ್ಲಿ ಮತ್ತು ಸಂಜೆ 6ರಿಂದ ರಾತ್ರಿ 10 ಗಂಟೆವರೆಗೆ 44ನೇ ವಾರ್ಡ್ ಶಾಂತಿ ನಗರ, ಬಾಲಾಜಿ ನಗರ ವ್ಯಾಪ್ತಿಯಲ್ಲಿ ನಾಗರಾಜ್ ಲೋಕಿಕೆರೆ ಅವರು ಮತ ಯಾಚಿಸುವರು.

## ನಾಳೆ 'ಕಲಾಕುಂಚ ನಡೆ ಮತದಾನದ ಕಡೆ'

ದಾವಣಗೆರೆ, ಮೇ 5- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ ಮತದಾನದ ಜಾಗೃತಿ ಮೂಡಿಸಲು ನಾಳೆ ಭಾನುವಾರ ಸಂಜೆ 5 ಗಂಟೆಗೆ ಜಯದೇವ ವೃತ್ತದಲ್ಲಿ 'ಕಲಾಕುಂಚ ನಡೆ ಮತದಾನದ ಕಡೆ ಕಾಲ್ನಡಿಗೆ ಜಾಥಾ' ನಡೆಯಲಿದೆ.






## ಮಣಿಪುರದಲ್ಲಿ ಐ.ಆರ್.ಎಸ್. ಅಧಿಕಾರಿ ಹತ್ಯೆ

ನವದೆಹಲಿ, ಮೇ 5 – ಮಣಿಪುರದ ಇಂಫಾಲ್‌ನಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿಯನ್ನು ಕಚೇರಿಯಿಂದ ಹೊರಗೆಳೆದು ಹತ್ಯೆ ಮಾಡಲಾಗಿದೆ ಎಂದು ಭಾರತೀಯ ಕಂದಾಯ ಸೇವೆ (ಐ.ಆರ್.ಎಸ್.) ಒಕ್ಕೂಟ ತಿಳಿಸಿದೆ. ಇಂಫಾಲ್‌ನಲ್ಲಿ ಸಹಾಯಕ ತೆರಿಗೆ ಅಧಿಕಾರಿಯಾಗಿದ್ದ ಲೆಟ್ಮಿಂಥಾಂಗ್ ಹೋಕಿಪ್ ಅವರನ್ನು ಹತ್ಯೆ ಮಾಡಲಾಗಿದೆ. ಕರ್ತವ್ಯ ನಿರತರಾಗಿರುವ ಅಮಾಯಕ ಸರ್ಕಾರಿ ನೌಕರರ ಹತ್ಯೆಯನ್ನು ಯಾವುದೇ ಸಿದ್ಧಾಂತದ ಮೂಲಕ ಸಮರ್ಥಿಸಲಾಗದು ಎಂದು ಒಕ್ಕೂಟ ಹೇಳಿದೆ. ಮಣಿಪುರದಲ್ಲಿ ಕಳೆದ 48 ಗಂಟೆಗಳಲ್ಲಿ ಹಿಂಸಾಚಾರ ಘಟನೆಗಳು ನಡೆದಿದ್ದು, 13 ಸಾವಿರಕ್ಕೂ ಹೆಚ್ಚು ಜನರನ್ನು ರಕ್ಷಿಸಿ ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿದೆ.

## ಸ್ಫೋಟದಲ್ಲಿ ಐವರು ಸೈನಿಕರು ಹುತಾತ್ಮ

ರಜೌರಿ, ಮೇ 5 - ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಕಂಡಿ ಅರಣ್ಯ ಪ್ರದೇಶದಲ್ಲಿ ಉಗ್ರರು ನಡೆಸಿದ ಸ್ಫೋಟಕ್ಕೆ ಸಿಲುಕಿ ಐವರು ಸೈನಿಕರು ಸಾವನ್ನಪ್ಪಿದ್ದಾರೆ ಹಾಗೂ ಸೈನ್ಯದ ಮೇಜರ್ ಒಬ್ಬರು ಗಾಯಗೊಂಡಿದ್ದಾರೆ. ಉಗ್ರರ ವಿರುದ್ಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆ ಹಿನ್ನೆಲೆಯಲ್ಲಿ ರಜೌರಿಯಲ್ಲಿ ಮೊಬೈಲ್ ಇಂಟ ರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ. ಕಂಡಿ ಅರಣ್ಯ ಪ್ರದೇಶದಲ್ಲಿ ಉಗ್ರರು ಇರುವ ಬಗ್ಗೆ ನಿರ್ದಿಷ್ಟ ಮಾಹಿತಿ ದೊರೆತ ನಂತರ ಸೈನ್ಯ ಕಾರ್ಯಾಚರಣೆ ಆರಂಭಿಸಿತ್ತು.






### ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ಅಣ್ಣಪ್ಪ ಎ.ಆರ್.**

ಸಹ ಪ್ರಾಧ್ಯಾಪಕರು, UBDT ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ.

ನಿಧನ : 06-05-2022

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ, ನಿಮ್ಮ ಪ್ರೀತಿ ಮತ್ತು ಆದರ್ಶಗಳೇ ಮರೆಯಾಗುತ್ತಿಲ್ಲ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ಪ್ರತಿ ಗಂಟೆಯಲ್ಲಿ ನಿನ್ನ ನೆನಪಿನಲ್ಲಿರುವ

ನಿನ್ನ ತಾಯಿ ಮತ್ತು ಅಪಾರ ಬಂಧು-ಬಳಗದವರು

### CONDOLENCE



*With profound grief we inform of the sad demise of OUR ASSOCIATION LIFE MEMBER*


SRI V.S. ARUNACHALA SETTY

passed away on 03-05-2023.

*We convey our condolences and prayerful support to his bereaved family.*

ADVOCATES TAX BAR ASSOCIATION, NEW DELHI

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 03-05-2023ರ ಬುಧವಾರ ಅಕಾಲಿಕವಾಗಿ ನಿಧನರಾದ ಹಿರಿಯ ತೆರಿಗೆ ಸಲಹೆಗಾರರೂ, ವಕೀಲರೂ ಹಾಗೂ ನಮ್ಮ ಸಹೋದ್ಯೋಗಿ ಶ್ರೀ ವಿ.ಎ. ಶ್ರೀಹರ್ಷ ಅವರ ತಂದೆಯವರಾದ

**ಶ್ರೀ ವಿ.ಎಸ್. ಅರುಣಾಚಲ ಶೆಟ್ರು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕೋಲಿಗ್ಸ್ ಕ್ಲಬ್ ಸದಸ್ಯರುಗಳು :

- ಹೆಚ್. ಬಸವರಾಜ್
- ಟಿ. ಕೊಟ್ರೇಶ್
- ಹೆಚ್.ಟಿ. ಸುಧೀಂದ್ರರಾವ್
- ಡಿ.ಆರ್. ಶಂಕರ್
- ಪ್ರಮೋದ್ ಪಿ. ಕಲಬುರ್ಗಿ
- ಕೆ.ಎಸ್. ಶಿವಕುಮಾರಪ್ಪ
- ಕೆ.ಎನ್. ಪ್ರಕಾಶ್
- ಎಂ.ಎಸ್. ಮೃತ್ಯುಂಜಯ
- ಹೆಚ್.ವಿ. ಸುರೇಶ್
- ಎನ್. ರವಿ
- ಎ. ಕೊಟ್ರಬಸವರಾಜೇಂದ್ರ
- ಟಿ.ಕೆ. ಗುರುಬಸವರಾಜ್
- ಹೆಚ್. ನಿರಂಜನ್
- ಟಿ.ಕೆ. ಮೋಹನ್

## ಎಸ್ಸೆಸ್-ಎಸ್ಸೆಸ್ಸಂ ಬೆಂಬಲಿಸಲು ಇಂದು ಸಂಘ-ಸಂಸ್ಥೆಗಳ ಸಭೆ

ದಿನಾಂಕ 10-05-2023ರ ಬುಧವಾರ ನಡೆಯಲಿರುವ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ **ಶ್ರೀ ಶಾಮನೂರು ಶಿವಶಂಕರಪ್ಪ** ಅವರನ್ನು

ಮತ್ತು

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್** ಅವರನ್ನು

ಬೆಂಬಲಿಸಲು ಈ ಕೆಳಕಂಡ ಸಂಘ-ಸಂಸ್ಥೆಗಳ ಸದಸ್ಯರ ಸಭೆಯನ್ನು ದಿನಾಂಕ 06-05-2023ರ ಶನಿವಾರ ಬೆಳಿಗ್ಗೆ 10.30 ಕ್ಕೆ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರ ನಿವಾಸ 'ಶಿವ ಪಾರ್ವತಿ' ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಕರೆಯಲಾಗಿದೆ.

ಈ ಎಲ್ಲಾ ಸಂಘಗಳ ಸದಸ್ಯರು ತಪ್ಪದೇ ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಆಗಮಿಸಬೇಕೆಂದು ಕೋರಲಾಗಿದೆ.

- ದಾವಣಗೆರೆ ಜಿಲ್ಲಾ ಅಕ್ಕಿ ಗಿರಣಿದಾರರ ಸಂಘ
- ಚೌಕಿಪೇಟೆ ಅಕ್ಕಿ ವರ್ತಕರ ಸಂಘ
- ದಾವಣಗೆರೆ ಅಕ್ಕಿ ವರ್ತಕರ ಕ್ಯಾನ್ವಾಸಿಂಗ್ ಏಜೆಂಟ್ಸ್ ಸಂಘ
- ದಾವಣಗೆರೆ ಟೌನ್ ವರ್ತಕರ ಸಂಘ
- ದಾವಣಗೆರೆ ತೌಡು ವ್ಯಾಪಾರಿಗಳ ಸಂಘ
- ದಾವಣಗೆರೆ ಎಪಿಎಂಸಿ ದಲ್ಲಾಳಿಗಳ ಸಂಘ
- ದಾವಣಗೆರೆ ಆಯಿಲ್ ಮಿಲ್ಸ್ ಮತ್ತು ಆಯಿಲ್ಸ್ ಸೀಡ್ಸ್ ವರ್ತಕರು
- ದಾವಣಗೆರೆ ಮೆಕ್ಕೆಜೋಳ ವರ್ತಕರ ಸಂಘ
- ಖಾಲಿಚೀಲ ವರ್ತಕರು, ದಾವಣಗೆರೆ
- ದಾವಣಗೆರೆ ಅಡಿಕೆ ವರ್ತಕರ ಸಂಘ

ಕೋಗುಂಡಿ ಬಕ್ಕೇಶಪ್ಪ
ಕಾರ್ಯದರ್ಶಿ
ದಾವಣಗೆರೆ ಜಿಲ್ಲಾ ಅಕ್ಕಿ ಗಿರಣಿದಾರರ ಸಂಘ, ದಾವಣಗೆರೆ.

### ವಿವಾಹ ವಾರ್ಷಿಕೋತ್ಸವ- ಶುಭ ಹಾರೈಕೆ

32



ತಮ್ಮ ವೈವಾಹಿಕ ಜೀವನದ ಸಾರ್ಥಕ 31 ವಸಂತಗಳನ್ನು ಪೂರೈಸಿ, ಇಂದು 32ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ ನಮ್ಮೆಲ್ಲರ ಆತ್ಮೀಯರು, ಹಿತೈಷಿಗಳು, ಒಡನಾಡಿಗಳು, ಮಾರ್ಗದರ್ಶಕರೂ ಆಗಿರುವ

**ಶ್ರೀ ವಸಂತಕುಮಾರ್ ಹಾಗೂ ಶ್ರೀಮತಿ ವಸಂತಕುಮಾರಿ**

ದಂಪತಿಗೆ ವೈವಾಹಿಕ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ ನೀಡಲಿ. ದಾಂಪತ್ಯ ಜೀವನ ನೂರ್ಕಾಲ ಬಾಳಲಿ ಎಂದು ಶುಭ ಹಾರೈಸುತ್ತೇವೆ.

- ಎ.ಗೋವಿಂದರಾಜ್, ಲಕ್ಷ್ಮಿ ಅಂಡ್ ಕೋ
- ಎಂ.ಎಸ್.ಶರಣಪ್ಪ, ವಿಕಾಸ್ ಅಂಡ್ ಕೋ
- ಷಾ ಮಗನ್‌ಲಾಲ್ ಫೂಲ್‌ಚಂದ್, ರಾಕೇಶ್‌ಕುಮಾರ್ ವಿ ಜೈನ್
- ಅಮರೇಶ್ ಗಟ್ಟಿಗನೂರು, ಜಮೀನ್ದಾರರು
- ಶ್ರೀ ವಿಜಯ ಗನ್ನಿ ಟ್ರೇಡರ್ಸ್, ಜಿ. ರಾಮಮೂರ್ತಿ
- ಶ್ರೀ ಮಹಾಲಕ್ಷ್ಮಿ ಗನ್ನಿ ಮರ್ಚೆಂಟ್ಸ್, ಜಿ.ವೈ ಮಲ್ಲಣ್ಣ
- ಶ್ರೀ ಆನಂದ & ಕೋ. ಹೆಚ್.ಎನ್. ಶಿವಲಿಂಗಪ್ಪ
- ಶ್ರೀಶೈಲ & ಕೋ. ಎಂ. ಮಲ್ಲಿಕಾರ್ಜುನ
- ಶ್ರೀ ಪ್ರಶಾಂತ್ ಗನ್ನಿ ಮರ್ಚೆಂಟ್ಸ್, ಆರ್. ಶಂಕರಪ್ಪ
- ಶ್ರೀ ವಿನಾಯಕ ಗನ್ನಿ ಮರ್ಚೆಂಟ್ಸ್, ಎಂ.ವಿ. ಮಲ್ಲಿಕಾರ್ಜುನ
- ಟಿ.ಎಂ. ಗನ್ನಿ ಮರ್ಚೆಂಟ್ಸ್, ಟಿ. ಮೀರಾಸಾಬ್
- ಶ್ರೀ ಪ್ರಭುದೇವ ಗನ್ನಿ ಮರ್ಚೆಂಟ್ಸ್, ಜಿ. ಕರಿಬಸಪ್ಪ
- ಶ್ರೀ ವೀರಭದ್ರೇಶ್ವರ ಗನ್ನಿ ಮರ್ಚೆಂಟ್ಸ್, ಆರ್.ಎಸ್ ಗೌಡರ್
- ಜಿ.ಬಿ ಬಸವರಾಜ್, ಬಸವೇಶ್ವರ ಗ್ಯಾರೇಜ್
- ಶ್ರೀ ಭವಾನಿ ಟ್ರೇಡರ್ಸ್ ಗನ್ನಿ ಮರ್ಚೆಂಟ್ಸ್, ಬಿ.ಎಲ್. ಪ್ರಭು
- ಮೆ|| ಚನ್ನಬಸವ & ಕೋ. ಚನ್ನಪ್ಪ ಕೋಳೂರ

|| ಶ್ರೀ ಬಸವೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಶ್ರೀ ಎರೇಬೂದಿಹಾಳು ಬಿ.ಓ. ರಾಮಚಂದ್ರಪ್ಪ ಮತ್ತು ಮಕ್ಕಳು

#1244/10, 2ನೇ ಮೇನ್, 9ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 28.04.2023ನೇ ಶುಕ್ರವಾರ ಮಧ್ಯಾಹ್ನ 3.10ಕ್ಕೆ ನನ್ನ ಧರ್ಮಪತ್ನಿಯಾದ



**ಶ್ರೀಮತಿ ವಿಮಲಮ್ಮನವರು**

ಇವರು ಲಿಂಗೈಕ್ಯರಾದ ಪ್ರಯುಕ್ತ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 06-05-2023ನೇ ಶನಿವಾರ ಬೆಳಿಗ್ಗೆ 11 ಗಂಟೆಗೆ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನ, ವಿದ್ಯಾನಗರ ದಾವಣಗೆರೆ ಇಲ್ಲಿ ನೆರವೇರಿಸಲಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ✦ ಶ್ರೀ ಬಿ.ಓ. ರಾಮಚಂದ್ರಪ್ಪ,
✦ ಶ್ರೀಮತಿ ಕವಿತ, ಶ್ರೀ ವೀರಣ್ಣ ಜತ್ತಿ, ತೇಜಸ್ವಿನಿ ✦ ಶ್ರೀಮತಿ ಸವಿತ, ಶ್ರೀ ಶಿವಕುಮಾರ್ ಬಿ.ಹೆಚ್. ✦ ಶ್ರೀಮತಿ ಜಾನ್ಹವಿ, ಶ್ರೀ ಚೇತನ ಬಿ.ಆರ್.
ಓದೋಗೌಡ್ರು ವಂಶಸ್ಥರು, ಎರೇಬೂದಿಹಾಳು, ಗ್ರಾಮಸ್ಥರು, ಹಂಪನೂರು ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 98869 38281

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte